13

# ಕಂಬಳಿಯು ನಿನ್ನ ಮೇಲೆ ಜಾರಿ ಬೀಳಲಿ

## (2 ಅರಸು 2)

ಜೀವನದಲ್ಲಿ ಅನೇಕ ಸ್ಥಾನಗಳು ಗುರುತಿಸುವಿಕೆಯ ಮತ್ತು ಅಧಿಕಾರಿಗಳ ವಿಶೇಷ ಚಿಹ್ನೆಗಳನ್ನು ಹೊಂದಿರುತ್ತವೆ. ಒಬ್ಬ ಪೋಲಿಸ್ ತನ್ನ ಸಮವಸ್ತ್ರವನ್ನೂ ಮತ್ತು ಬ್ಯಾಡ್ಜನ್ನು ಹೊಂದಿರುತ್ತಾನೆ. ಅಂಬ್ಯೂಲೆನ್ಸ್ ಚಾಲಕನು ಮಿಂಚುವ ದ್ವಿಪದ ವಾಹನವನ್ನೂ ಮತ್ತು ಸೈರನ್‌ನನ್ನೂ ಹೊಂದಿರುತ್ತಾನೆ. ಇನ್ನೂ ಕೆಲವರು "ವ್ಯವಸ್ಥಾಪಕ" ಎಂಬ ನಾಮಫಲಕದ ಜೋಡನೆಯಿರುವುದನ್ನು ಹೊಂದಿರುತ್ತಾರೆ.

ಹಾಗೆಯೇ, ಎಲೀಯನು ತನ್ನ ಕಂಬಳಿಯನ್ನು ಹೊಂದಿದ್ದನು. ದೇವರು ಎಲೀಯನನ್ನು ಗುಹೆಯಿಂದ ಹೊರಗೆ ಕರೆದಾಗ ಪ್ರವಾದಿಯು "ತನ್ನ ಮುಖವನ್ನು ಕಂಬಳಿಯಿಂದ ಮುಚ್ಚಿಕೊಂಡಿದ್ದನು" (1 ಅರಸು 19:13). ಎಲೀಯನು ದೇವರ ಸೂಚನೆಗಳನ್ನು ಪಾಲಿಸಿಸುವಾಗ ಮತ್ತು ಎಲೀಷನನ್ನು ಕರೆಯಲು ಆತನನ್ನು ತನ್ನ ಬದಲಾಗಿ ಆರಿಸಿದ್ದರ ಚಿನ್ಹೆಯಾಗಿ, "ಆತನು ತನ್ನ ಕಂಬಳಿಯನ್ನು ಅವನ ಮೇಲೆ ಹಾಕಿದನು" (1 ಅರಸು 19:13). ಆತನು ತನ್ನ ಕಂಬಳಿಯನ್ನು ಸುರಳಿ ಸುತ್ತಿದನು ಮತ್ತು ಕೋಲಿನಂತೆ ಹೊಡೆಯಲು ಬಳಸಿದನು ಮತ್ತು ಯೊರ್ದನ ಹೊಳೆಯ ನೀರನ್ನು ಎರಡು ಭಾಗ ಮಾಡಿದನು (2 ಅರಸು 2:8).

ಕಂಬಳಿ ಎಂದರೇನು? "ಗ್ಯಾಸ್‌ದೀಪ" ಸಮಾನವಾದ ಪದವು ಹೊಗೆಗೂಡಿನ[1] ಮೇಲೆ ಮುಚ್ಚುವುದನ್ನು ಸೂಚಿಸುವುದಾಗಿದೆ, ಆದರೆ "ಗ್ಯಾಸ್ ದೀಪವು" (ಕೊನೆಯಲ್ಲಿ) ಪ್ರತಿದಿನದ ಉಪಯೋಗಿತವಾಗುವ ಪದವಲ್ಲ.[2] ಇಂಗ್ಲೀಷ್ ಪದವಾದ "mantle" ಎಂಬುದು ಲ್ಯಾಟೀನ್ ಪದವಾದ "ನಿಲುವಂಗಿ" ಪದದಿಂದ ಬಂದದ್ದಾಗಿದೆ. ಇದರ ಅರ್ಥವು "ಸಡಿಲವಾದ ತೋಳುಗಳಿಲ್ಲದ ಸಾಮಾನ್ಯವಾಗಿ ಇತರ ಬಟ್ಟೆಗಳ ಮೇಲೆ ಹಾಕುವಂತಹ ಉಡುಗೆ"[3] ಎಂಬುದನ್ನು ಸೂಚಿಸುವುದಾಗಿದೆ. ಇಬ್ರಿಯ ಪದದಿಂದ ಭಾಷಾಂತರವಾದ "ಕಂಬಳಿಯು" ಅಡೇರ್ತ್, ಎಂದಿದ್ದು ಇದರ ಅರ್ಥವು ಮೂಲತಹವಾಗಿ ಅದೇ ಆಗಿದೆ. ಸಾಮಾನ್ಯವಾಗಿ ಇದೊಂದು ಸರಳ ಉಡುಗೆಯಾಗಿದ್ದು. ಕುರುಬರ ನಿಲುವಂಗಿ ಅಥವಾ ಭುಜದ ಸುತ್ತಲೂ ಹಾಗೆಯೇ ಹಾಕಿಕೊಳ್ಳುವಂತದ್ದಾಗಿತ್ತು. ಸಾಂದರ್ಭಿಕವಾಗಿ ಆ ಪದವು ಅರಸನ ಅತ್ಯುಚ್ಚ ನಿಲುವಂಗಿಗಾಗಿ ಬಳಸಲ್ಪಡುತ್ತಿತ್ತು.[4] ಕಂಬಳಿಯು ದನಗಾಹಿಗಳ ಪೊಂಚೋಕಕ್ಕೆ (ಪೋಶಾಕಕ್ಕೆ) ಹೋಲಿಸಲ್ಪಡುತ್ತಿದ್ದು, ಇದೊಂದು ಭಾರತೀಯರ ಬ್ಲಾಂಕೆಟ್, ಮೆಕ್ಸಿಕೋ, ಸೆರೆಪ್, ಅಥವಾ ವೃದ್ಧ ಮಹಿಳೆಯ ಶಾಲ್ ಆಗಿದೆ.

ಎಲೀಯನ ಕಂಬಳಿಯು ಸರಳವಾದ ಬಟ್ಟೆಯಾಗಿದ್ದು ಇದು ಚರ್ಮ, ಕೂದಲು ಅಥವಾ ಇತರ ಒರಟಾದ ಸಂಗತಿಗಳಿಂದ ಮಾಡಲ್ಪಟ್ಟಿತ್ತು. ಅಹಜ್ಯನ ದೂತರು ಎಲೀಯನನ್ನು "ರೋಮಾಗಳುಳ್ಳ ಮನುಷ್ಯ" (2 ಅರಸು 1:8) ಎಂದು ವರ್ಣಿಸಿದ್ದು ಇದು ವ್ಯಕ್ತಿಯನ್ನೋ ಅಥವಾ ಆತನ ಉಡುಪನ್ನೋ ಸೂಚಿಸುವುದಾಗಿದೆ. 2 ಅರಸು 2:8 ರಲ್ಲಿ ಎಲೀಯನು ತನ್ನ ಕಂಬಳಿಯನ್ನು ಮಡಿಸಿದನು ಮತ್ತು ಯೊರ್ದನ ನದಿಯನ್ನು ಹೊಡೆದನು, ಸ್ಪೆಟುಗೆಂಟಿನಲ್ಲಿ ಕಂಬಳಿಯ ಬದಲಾಗಿ "ಕುರಿಚರ್ಮ" ಎಂದಿದೆ. ಎಲೀಯನನ್ನು ಅನುಸರಿಸಿ, ಅನೇಕ ಪ್ರವಾದಿಗಳು ಒರಟಾದ ಕಂಬಳಿಯನ್ನು ತಮ್ಮ ಚಿಹ್ನೆಯನ್ನಾಗಿ ಮಾಡಿಕೊಂಡರು. ಜೆಕರ್ಯನು ಸುಳ್ಳುಪ್ರವಾದಿಗಳು ಹಾಕಿಕೊಂಡಿರುವ "ಮೋಸಕ್ಕಾಗಿ ಕಂಬಳಿಯನ್ನು [*addereth*, mantle] ಹೊದ್ದವನೂ" ಎಂದು ಸೂಚಿಸುತ್ತಾನೆ (ಜೆಕರ್ಯ 13:4). ಸ್ನಾನಿಕನಾದ ಯೋಹಾನನು,

"... ಎಲೀಯನ ಗುಣಶಕ್ತಿಗಳಿಂದ ಕೂಡಿದವನಾಗಿದ್ದನು" (ಲೂಕ 1:17), ಆತನು ಪ್ರವಾದಿಯಂತೆ ಬಂದನು (ಲೂಕ 7:26), "ಒಂಟೆಯ ಕೂದಲಿನ ಹೊದಿಕೆಯನ್ನು ಹೊಂದಿದ್ದನು" (ಮತ್ತಾಯ 3:3, 4). ನಾವು ಎಲೀಯನ ಕಂಬಳಿಯ ಬಗೆಗೆ ಯೋಚಿಸುತ್ತಿದ್ದಂತೆಯೇ, ಇದೊಂದು ಪ್ರಾಣಿಯ ಕೂದಲಿನ ಸಡಿಲವಾದ ಉಡುವು ಅಥವಾ ಆತನ ಭುಜದಸುತ್ತಲೂ ಹಾಕಿಕೊಂಡಿರುವ ಒರಟಾದ ವಸ್ತ್ರವೂ ಆಗಿರಬಹುದು.[5]

ನಮ್ಮ ಹಿಂದಿನ ಪಾಠದಲ್ಲಿ, ಎಲೀಯನು[6] ಸುಳಿಗಾಳಿಯಲ್ಲಿ ಮೇಲಕ್ಕೆತ್ತಲ್ಪಟ್ಟಾಗ ಕಂಬಳಿಯು ಎಲೀಷನ ಮೇಲೆ ಬಿದ್ದುದನ್ನು ನಾವು ನೋಡುತ್ತವೆ. "ಕಂಬಳಿಯು ನಿನ್ನ ಮೇಲೆ ಜಾರಿ ಬೀಳಲಿ" ಈ ಸವಾಲಿನೊಂದಿಗೆ *ನಾವು* ನಮ್ಮ ಸರಣಿಯನ್ನು ಮುಗಿಸುವ.

## ದೇವರಿಗೆ ಇನ್ನೂ ಇಸ್ರಾಯೇಲಿನಲ್ಲಿ ಸ್ತ್ರೀ ಪುರುಷರ ಅವಶ್ಯಕತೆಯು ಇದೆ

ಎಲೀಯನು ಬಹಳಷ್ಟು ಸಾಧಿಸಿದನು. ಎಲೀಯನು ಈ ದೃಷ್ಯಕ್ಕೆ ಬರುವ ಮೊದಲು, ಯೆಹೋವನ ಪ್ರವಾದಿಗಳಿಗೆ ಆಹಾಬನೊಡನೆ ಮಾತನಾಡುವದು ಯೋಚಿಸಲಾರದಂತಹದ್ದಾಗಿತ್ತು (1 ಅರಸು 20). ಈಜಬೆಲಳು ಯೆಹೋವನ ಆಜ್ಞೆಗಳನ್ನು ಕೈಕೊಳ್ಳುವುದರಲ್ಲಿ ಯಾವ ಪರಿಗಣನೆಯನ್ನೂ ಮಾಡಲಿಲ್ಲ (1 ಅರಸು 21 ರಲ್ಲಿ ಈಗಾಗಲೇ ಆಕೆಯು ತನ್ನ ಸ್ವಂತ ಉದ್ದೇಶಕ್ಕೆ ಅವುಗಳನ್ನು ಪರಿವರ್ತಿಸಿಕೊಂಡಂತೆ). ಆಹಾಬನ ನಾನೂರು ಜನ ಆಸ್ಥಾನ ಪ್ರವಾದಿಗಳು ಯೆಹೋವನ ಹೆಸರಿನಲ್ಲಿ ಎಂದಿಗೂ ಮಾತನಾಡುತ್ತಿರಲಿಲ್ಲ (1 ಅರಸು 22:11, 12) ಕಪಟವಾಗಿಯೂ ಕೂಡ ಮಾತಾಡುತ್ತಿರಲಿಲ್ಲ, ಪ್ರವಾದಿ ಮಂಡಲಿಯ ಶಾಲೆಗಳು (ನೋಡಿರಿ 2 ಅರಸು 2:3, 5) ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಎಲೀಯನ ಶ್ರಮದ ಫಲವಾಗಿ, ಗುರುತರವಾದ ಬೆಳವಣಿಗೆಯು ಮಾಡಲ್ಪಟ್ಟಿತು. ಆಹಾಬನ ಮಗನಾದ ಯೋರಾಮನು ಪಟ್ಟಕ್ಕೆ ಬಂದನು "ತನ್ನ ತಂದೆಯು ಬಾಳನಿಗೋಸ್ಕರ ನಿಲ್ಲಿಸಿದ ಕಲ್ಲಿನ ಕಂಬವನ್ನು ತೆಗೆದುಹಾಕಿದನು" (2 ಅರಸು 3:2).

ಪ್ರತಿಯೊಂದು ಮಾಡಲ್ಪಟ್ಟಿದೆ ಅಥವಾ ದೇವರಿಗೆ ಇನ್ನು ಮೇಲೆ ವಿಶೇಷ ಪ್ರತಿನಿಧಿಗಳು ಬೇಕಾಗಿಲ್ಲ ಎಂಬುದು ಇದರ ಅರ್ಥವಲ್ಲ. ಬಾಳನ ಆರಾಧನೆಯು 2 ಅರಸು 10:18-27 ರವರೆಗೆ ಮುಂದುವರೆಯಿತು, "ಯೆಹು ಬಾಳನ ಆರಾಧಕರನ್ನು ಕೂಡಿಹಾಕಿದನು ಮತ್ತು ಬಾಳನನ್ನು ಇಸ್ರಾಯೇಲಿನಿಂದ ಹೊರಗೆ ತೆಗೆದುಹಾಕಿದನು" (ವಚನ 28). ಇತರ ಕೆಟ್ಟತನಗಳು ರೂಢಿಗೆ ಬಂದವು, ಅದರಲ್ಲಿ ಯೆರೊಬ್ಬಾಮನಿಂದ ಪುನಸ್ಥಾಪಿತವಾದ ವಿಗ್ರಹಾರಾಧನೆಯು ಸೇರಿತ್ತು. ದೇವರಿಗೆ ಇನ್ನೂ ಇಸ್ರಾಯೇಲಿನಲ್ಲಿ ಜನರ ಅವಶ್ಯಕತೆಯು ಇತ್ತು.

ಇಂದು ದೇವರಿಗೆ ಇಸ್ರಾಯೇಲಿನಲ್ಲಿ ಆತನ ಸ್ತ್ರೀ ಪುರುಷರ ಅವಶ್ಯಕತೆಯು ಇನ್ನೂ ಇದೆ. ನಮಗಿಂತ ಮುಂಚೆ ಬಂದವರಿಗಾಗಿ, ಸತ್ಯವನ್ನು ಬೋಧಿಸುವಲ್ಲಿ ಮತ್ತು ಹೇಳುವಲ್ಲಿ, ತಮ್ಮ ದಿನದಲ್ಲಿ ಕಷ್ಟಗಳನ್ನು ಮತ್ತು ಅಧಾರ್ಮಿಕತೆಯನ್ನು ಎದುರಿಸುವಲ್ಲಿ ತಮ್ಮ ಜೀವನ ಪೂರ್ತಿ ಕಳೆದಂತವರಿಗಾಗಿ ನಾವು ದೇವರಿಗೆ ವಂದನೆಗಳನ್ನು ಹೇಳಬೇಕು. ಅವರು ಹೆಚ್ಚಾದುದನ್ನು ಸಂಪೂರ್ಣಗೊಳಿಸಿದರು. ದೇವರ ಜನರ ಸಭೆಯು ಜಗತ್ತಿನ ಸುತ್ತಲೂ ಕಂಡುಬರಬೇಕು. ಪೂರ್ವದ ಯೂರೋಪಿನ ಸುವಾರ್ತಾಚಳುವಳಿಯಂತಹ ಅಸ್ತಿತ್ವವಿರುವ ಸಂಗತಿಗಳಿಗೆ ನಾವು ಸಾಕ್ಷಿಗಳಾಗಿದ್ದೇವೆ. ಪ್ರತಿಯೊಂದು ಸಭೆಗೂ ಇರುವ ಪುರಾವೆ ಎಂದರೆ ಯೆಹೋವನು ತನಗೆ ಸಮರ್ಪಿತರಾದ ಸ್ತ್ರೀಪುರುಷರನ್ನು ಹೊಂದಿದ್ದಾನೆ ಎಂಬುದೇ.

ಕೆಲಸವು ಮುಗಿಯಿತು ಎಂದು ನಾವು ಯೋಚಿಸಕೂಡದು. ನಮ್ಮ ಸುತ್ತಲು ಮತ್ತು ಜಗತ್ತಿನ ಸುತ್ತಲೂ ಇರುವ ಆತ್ಮಗಳು ಇನ್ನೂ ಕತ್ತಲೆಯಲ್ಲಿಯೇ ಇವೆ ಮತ್ತು ಅವಕಾಶಗಳು ಬಹುಶಃ ಜಾರಿ ಹೋಗುತ್ತಿವೆ. ರಷ್ಯಾ ಮತ್ತು ಪಶ್ಚಿಮ ಯೂರೋಪಿನಲ್ಲಿ ಕೆಲಸ ಮಾಡುತ್ತಿರುವ

ನನ್ನೊಬ್ಬ ಸ್ನೇಹಿತನು ಕಮ್ಯುನಿಸಂ ಅಲ್ಲಿ ಇನ್ನೂ ಜೀವಂತವಿದೆ ಮತ್ತು ಇನ್ನೂ ಸುವಾರ್ತೆಸೇವೆಯ ಕಾರ್ಯ ಎಂದು ಹೇಳಿದನು.

ಅಮೇರಿಕಾದಲ್ಲಿ ಮತ್ತು ಅನೇಕ ಇತರ ದೇಶಗಳಲ್ಲಿ, ಇದು ನಿಸ್ಸಂಶವಾಗಿ "ಬಾಳನ ಆರಾಧನೆಯು" ಇನ್ನೂ ನಮ್ಮಲ್ಲಿ ಇದೆ. ನಾವು ಕಲ್ಲು ವಿಗ್ರಹಗಳಿಗೆ ಅಡ್ಡಬೀಳುತ್ತಿಲ್ಲ, ಆದರೆ ಸಂಪತ್ತು ಅಧಿಕಾರ ಮತ್ತು ಆಸ್ತಿಗಳನ್ನು ನಾವು ಆರಾಧಿಸುತ್ತಿದ್ದೇವೆ. ಇಬ್ರಿಯ ಪತ್ರಿಕೆಯ ಲೇಖಕನು "ನಿಮಗಿರುವವಗಳಲ್ಲಿ ತೃಪ್ತರಾಗಿರಿ" (ಇಬ್ರಿಯ 13:5) ಎಂದು ಹೇಳುತ್ತಾನೆ; ಆದರೆ ಪ್ರತಿ ಜಾಹಿರಾತಿನಲ್ಲಿ, ಪ್ರತಿಯೊಂದು ವಾಣಿಜ್ಯಪರದೆಯಲ್ಲಿ, "ನಾವು ಏನನ್ನು ಹೊಂದಿರುವೆವೋ ಅದರಲ್ಲಿ ತೃಪ್ತಿಪಡದಿರು. ನಿನಗೆ ಇನ್ನೂ ಹೆಚ್ಚು ಹೆಚ್ಚು ಅವಶ್ಯವಿದೆ" ಎಂಬುದನ್ನು ನಾವು ನೋಡುತ್ತೇವೆ!

ದೇವಾಲಯಗಳು ವೇಶ್ಯಾತನದ ಕಾರ್ಯಗಳಲ್ಲಿ ತೊಡಗುವುದನ್ನು ನಿಲ್ಲಿಸಲು ನಮಗಿನ್ನು ಬಾಳನ ದೇವಸ್ಥಾನಗಳಿಗೆ ಹೋಗಬೇಕಿಲ್ಲ. ಈಗ ಅಂತಹ ಕೃತ್ಯಗಳು ಉತ್ತಮವಾದ ಹೋಟಲಗಳಲ್ಲಿಯೂ "ಸುಂದರವಾದ" ಮನೆಗಳಲ್ಲಿಯೂ ನಡೆಯುತ್ತಿವೆ. ಅನೈತಿಕವಾದ ಕಾರ್ಯದಲ್ಲಿ ತೊಡಗಿದವರಿಗೆ ಬೈಬಲ್ "ಅಂತವರಿಗೆ ದೇವರ ರಾಜ್ಯಕ್ಕೆ ಪ್ರವೇಶವಿಲ್ಲ" ಎಂದು ಇನ್ನೂ ಹೇಳುತ್ತಿದೆ (ಗಲಾತ್ಯ 5:19-21), ಆದರೆ ಅನೈತಿಕತೆಯು ಅನೇಕ ಜನರ ಜೀವನ ಶೈಲಿಯಾಗಿದೆ. ದೇವರ ದೈವ ಕೃಪೆಯಲ್ಲಿ, ರಾಷ್ಟ್ರಮಟ್ಟದಲ್ಲಿ ಏಡ್ಸ್ ನಂತಹ ಸಾಂಕ್ರಾಮಿಕ ಜಾಡ್ಯದ ಅರಿವು ಉಂಟುಮಾಲ್ಪಟ್ಟಿದೆ. ಹೇಗೋ ಉಪವಾಸ ವಿರುವುದನ್ನು ಕೇಳುವ ಬದಲು ಅನೈತಿಕತೆಯು ಪರಿಹಾರವಾಗಿರುತ್ತದೆ. ಜನನ ನಿಯಂತ್ರಣದ ಸಾದನಗಳನ್ನು ಮಕ್ಕಳ ಕೈಗೆ ಕೊಡುತ್ತಿರುವುದನ್ನು ಮತ್ತು ಅವರಿಗೆ "ಸುರಕ್ಷಿತ ಲೈಂಗಿಕತೆಯ" ಬಗೆಗೆ ಬೋಧನೆಯನ್ನು ಮಾಡಲಾಗುತ್ತಿರುವುದನ್ನು ಕೇಳುತ್ತಿದ್ದೇವೆ.

ಇದೆಲ್ಲದರ ಪರಿಣಾಮವು ನಮ್ಮ ರಾಷ್ಟ್ರ ಮತ್ತು ಇತರವುಗಳಿಗೆ ಹೃದಯವೇದನೆ, ಕ್ಷೀಣತೆ ಮತ್ತು ಅವಮಾನ ಇವೆಲ್ಲವುಗಳಿಂದ ತುಂಬಿಕೊಂಡಿದೆ. ಇದೆಲ್ಲದರ ದುಃಖಮಯವಾದ ಪರಿಣಾಮವು ಸಾವಿರಾರು ಕುಟುಂಬಗಳನ್ನು ಕ್ಷೀಣಿಸುತ್ತ ಇರುವುದಕ್ಕೆ ಕಾರಣ ಆಗಿದೆ!

ದೇವರಿಗೆ ಇಸ್ರಾಯೇಲ್ಯರಲ್ಲಿ ಆತನ ಪುರುಷರ, ಸ್ತ್ರೀಯರ, ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಅವಶ್ಯಕತೆಯು ಈಗ ಇದ್ದಷ್ಟು ಮುಂಚೆ ಇರಲಿಲ್ಲ. ದೇವರಿಗೆ ತನಗಾಗಿ ನಿಲ್ಲುವ, ಮತ್ತು ಆತನ ಮಾರ್ಗದಲ್ಲಿ ನಡೆಯುವ ಜನರ ಅವಶ್ಯಕತೆಯು ಇನ್ನೂ ಇದೆ. ತಮ್ಮ ಧ್ವನಿಗಳನ್ನು ಕೇಳುವಂತೆ ಮಾಡುವ ಜನರ ಅವಶ್ಯಕತೆಯು ಇನ್ನೂ ದೇವರಿಗಿದೆ. ಒಬ್ಬ ಶಿಲುಬೆಯ ಶ್ರೇಷ್ಟ ಸೈನಿಕನು ಮತ್ತು "ಇಸ್ರಾಯೇಲಿನ ತಾಯಂದಿರು" ಕ್ರಿಸ್ತನಿಗಾಗಿ ಸಾಯುವುದನ್ನು ಕೇಳುತ್ತಲೇ ಬಂದಿದ್ದೇವೆ ಅವರ ಸ್ಥಾನವನ್ನು ತುಂಬುವವರು ಯಾರು? ಯಾರು?

## ದೇವರು ವಿಶೇಷ ರೀತಿಯ ಸ್ತ್ರೀ ಪುರುಷರನ್ನು ಬಳಸುವವನಾಗಿದ್ದಾನೆ

ದೇವರು ಯಾವ ತರದ ಸ್ತ್ರೀ ಪುರುಷರನ್ನು ಬಳಸುವವನಾಗಿದ್ದಾನೆ? ಸಿದ್ಧನಾದವನು, ಒಪ್ಪಿಕೊಳ್ಳುವವನು, ಮತ್ತು ಸಮರ್ಥನಾಗಿರುವವನು ಎಂಬ ಪದಗಳು ಸೇವೆಯನ್ನು ಪ್ರಾರಂಭಿಸಲು ಸಿದ್ಧರಾಗಿರುವಂತಹ ವ್ಯಕ್ತಿಗಳನ್ನು ವರ್ಣಿಸುವಂತವುಗಳಾಗಿವೆ. ಆ ಪದಗಳನ್ನು ಉಪಯೋಗಿಸಿ ದೇವರು ಉಪಯೋಗಿಸುವ ವ್ಯಕ್ತಿಯ ಬಗೆಗೆ ಚರ್ಚಿಸುವಾ:

ಮೊದಲು, ಯಾರು ತಮ್ಮನ್ನು ತಾವು ಉಪಯೋಗವಾಗಲು ಸಿದ್ಧಪಡಿಸಿಕೊಂಡಿರುತ್ತಾರೋ ಅಂತವನನ್ನು ದೇವರು ಉಪಯೋಗಿಸುತ್ತಾನೆ. ಎಲೀಯನು ಧೈರ್ಯಗೊಂಡಿದ್ದಾಗ, ದೇವರು ಆತನಿಗೆ, "ನೀನು ಬಂದ ದಾರಿಯಿಂದ ಹಿಂತಿರುಗಿ ದಮಸ್ಕದ ಅರಣ್ಯದೊಳಕ್ಕೆ ಹೋಗು ... ಅಬೇಲ್ ಮೆಹೋಲದವನೂ ಶಾಫಾಟನ ಮಗನೂ ಆದ ಎಲೀಷನನ್ನು ನಿನಗೆ ಬದಲಾಗಿ ಪ್ರವಾದಿಯನ್ನಾಗಿಯೂ ಅಭಿಷೇಕಿಸು" (1 ಅರಸು 19:15, 16). ದೇವರು ತನಗಾಗಿ ಕಾಯುವವನನ್ನು ಹೊಂದಿದ್ದನು ಅವನೇ ಎಲೀಷನು. ದೇವರು ಯಾಕೆ ಮತ್ತು ಹೇಗೆ

ಎಲೀಷನನ್ನು ಆರಿಸಿದನೂ ಎಂಬುವಂತದ್ದು ನನಗೆ ಸರಿಯಾಗಿ ತಿಳಿಯದು. ಎಲೀಷನಿಗೆ ತಾನು ದೇವರ ಆರಿಸುವಿಕೆಯಲ್ಲಿದ್ದೇನೆ ಎಂದು ಎಲೀಯನು ಕಂಬಳಿಯನ್ನು ಅವನ ಮೇಲೆ ಹಾಕುವ ಮುನ್ನವೇ ತಿಳಿದಿದ್ದನೇನೋ ನನಗೆ ತಿಳಿಯದು. ಎಲೀಷನು ದೇವರಿಗೆ ಉಪಯೋಗಿ ತವಾಗಲು ಸಿದ್ಧನಾಗಿಲ್ಲದೆ ಹೋಗಿದ್ದರೆ ದೇವರ ಆರಿಸುವಿಕೆ ಮತ್ತು ಎಲೀಯನ ಕಂಬಳಿಯನ್ನು ಹಾಕುವಿಕೆ ಯಾವ ಅರ್ಥವನ್ನು ಕೊಡುತ್ತಿರಲಿಲ್ಲವೇನೋ ಎಂದು ನನಗೆ ಅನ್ನಿಸುತ್ತದೆ.

"ಎಲೀಯನು ಅಲ್ಲಿಂದ ಹೊರಟುಹೋಗಿ ಶಾಫಾಟನ ಮಗನಾದ ಎಲೀಷನನ್ನು ಕಂಡನು" (1 ಅರಸು 19:19ಎ). ಎಲೀಯನ ದೇವರು ನೇಮಿಸಿದ ಆತನ ಅಭಿಶಕ್ತನಾದವನನ್ನು ಆತನು ಸಿಕ್ಕುವ ತನಕ ಹುಡುಕಲು ಸಿದ್ಧನಿದ್ದನು. ಆತನು ತಾನು ಬಂದಂತಹ ಒರಟಾದ ದೇಶದಲ್ಲಿ ಆತನನ್ನು ಕಂಡುಕೊಳ್ಳಲಿಲ್ಲ ಆದರೆ ಆತನು ಅವನನ್ನು ಯೋರ್ಧನ ಕೊಳ್ಳದ ಫಲವತ್ತಾದ ಪ್ರದೇಶದಲ್ಲಿ ಕಂಡುಕೊಂಡನು. ಆತನು ಸುರುಳಿಯನ್ನು ತೆಗೆದುಕೊಂಡು ಭೋಧಿ ಸುತ್ತಿರುವಾಗ ಅಥವಾ ಅಧ್ಯಯನ ಮಾಡುತ್ತಿರುವಾಗ ಆತನನ್ನು ಸಂಧಿಸಲಿಲ್ಲ. ಬದಲಾಗಿ ಎಲೀಯನು ಎಲೀಷನೆಡೆಗೆ ದೂರದಿಂದ ನೋಡುವಾಗ, "ಆತನು ಕಂಡದ್ದು ಎಲೀಷನು ತನ್ನ ಹನ್ನೆರೆಡನೆಯ ಜೋಡಿಯ ಎತ್ತಿನಿಂದ ತಾನೇ ಉಳುತ್ತಿದ್ದನು" (1 ಅರಸು 19:19ಬಿ). ಎಲೀಷನು ಒಬ್ಬ ರೈತನಾಗಿದ್ದನು. U.S. ನಲ್ಲಿ ಅನೇಕ ಬೋಧಕರು ಪುನರುಜ್ಜೀವನ ಕ್ರಾಂತಿಯ ಸಮಯದಲ್ಲಿ ರೈತರಾಗಿದ್ದರು, ಅವರು ತಾವು ತಮ್ಮ ದಿನನಿತ್ಯದ ಕಾಯಕವನ್ನು ಮಾಡುತ್ತಾ ಬೆವರನ್ನು ಸುರಿಸಿ ಸಂಪಾದಿಸುತ್ತಿದ್ದರು ಮತ್ತು ಸಿಕ್ಕ ಪ್ರತಿಯೊಂದು ಅವಕಾಶವನ್ನು ಸುವಾರ್ತೆಯನ್ನು ಸಾರಲು ಉಪಯೋಗಿಸುತ್ತಿದ್ದರು. ದೇವರು ತನಗಾಗಿ ಸಿದ್ಧರಾಗಿರುವವರನ್ನು ಉಪಯೋಗಿ ಸುವವನಾಗಿದ್ದಾನೆ.

"ಎಲೀಯನು ಅಲ್ಲಿಂದ ಹಾದುಹೋಗುವಾಗ ತನ್ನ ಕಂಬಳಿಯನ್ನು ಅವನ ಮೇಲೆ ಹಾಕಿದನು"[7] (1 ಅರಸು 19:20ಎ). ಇದು ಎಲೀಷನಿಗೆ ಅಪರಿಚಿತವಾದ ಸಂದರ್ಭವಾಗಿತ್ತು. ಎಲೀಷನು ಎಲೀಯನ ಬಗೆಗೆ ಕೇಳಿರುವುದರಲ್ಲಿ ಯಾವ ಸಂದೇಹವೂ ಇಲ್ಲ, ಆದರೆ ಅವರು ಒಬ್ಬರನ್ನೊಬ್ಬರು ಭೇಟಿಯಾಗಿರುವುದನ್ನು ನಂಬುವ ಯಾವ ಕಾರಣಗಳೂ ಇಲ್ಲ. ಒಂದು ದಿನ ಎಲೀಷನು ಉಳುತ್ತಿದ್ದಾಗ ಅಲ್ಲಿ ಬೆಂಕಿಯಂತಿರುವ ಕಣ್ಣುಗಳೊಡನೆ ಕಾಡು ವ್ಯಕ್ತಿಯಂತಿರುವ ಪ್ರಾಣಿಯು ಎಲ್ಲಿಂದಲೂ ಕಾಣಿಸಿಕೊಂಡನು ಆ ಮನುಷ್ಯನು ಇವನನ್ನು ನೋಡಿದನು ಮತ್ತು ತನ್ನ ಕಂಬಳಿಯನ್ನು ಅಂದರೆ ತನ್ನ ಭುಜದ ಸುತ್ತಲೂ ಹಾಕಿಕೊಳ್ಳುವ, ಆತನ ದೇಹದಲ್ಲಿರುವ ಬೆವರನ್ನು ಮೆತ್ತಿಕೊಂಡಿರುವ, ಆತನು ಪ್ರಯಾಣಿಸಿದ ಧೂಳುಮಯ ಪ್ರಯಾಣದ ದಣಿವನ್ನು ಹೊಂದಿದ್ದ, ರಾತ್ರಿ ತಲೆಗೆ ದಿಂಬಾಗಿ ಬಳಸುವ ಒರಟಾದ ವಸ್ತ್ರವಾದ ಕಂಬಳಿಯನ್ನು ಅವನ ಮೇಲೆ ಹಾಕಿದನು. ಆತನು ತನ್ನ ಕಂಬಳಿಯನ್ನು ಮೇಲಕ್ಕೆ ಎತ್ತಿದನು, ಯಾವುದೇ ಮಾತಿಲ್ಲದೇ, ಎಲೀಷನ ಭುಜಕ್ಕೆ ಅದನ್ನು ತೊಡಗಿಸಿದನು.

ನಿಜವಾಗಿಯೂ, ಎಲೀಷನಿಗೆ ಅದರ ಅರ್ಥವು ಏನು ಎಂದು ತಿಳಿದಿತ್ತು. ಬಹುಶಃ ದೇವರು ಎಲೀಷನಿಗೆ ದಿವ್ಯ ದರ್ಶನವನ್ನು ಕೊಟ್ಟಿದ್ದನು. ಅದಕ್ಕಿಂತ ಹೆಚ್ಚಾಗಿ ಎಲೀಯ ಮತ್ತು ಆತನ ಕಂಬಳಿಯ ಬಗೆಗೆ ಆತನು ತಿಳಿದಿದ್ದನು ಮತ್ತು ಎಲೀಯ ಆ ಕಾರ್ಯದ ಬಗೆಗೆ ಅದರ ಮಹತ್ವದ ಬಗೆಗೆ ಎಲೀಷನು ತಿಳಿದಿದ್ದನು.

ಎಲೀಷನ ಪ್ರತಿಕ್ರಿಯೆಯು ಏನಾಗಿರಬೇಕು? ದೇವರು ಎಂದಿಗೂ ತನ್ನ ಚಿತ್ತವನ್ನು ಮಾಡಲು ನಮಗೆ ಒತ್ತಾಯಿಸುವುದಿಲ್ಲ. ನಮ್ಮನ್ನು ಆತನು ಸ್ವತಂತ್ರ್ಯವಾದ ನೈತಿಕ ನಿಯೋಗಿ ಗಳಾಗಿರಲಿಕ್ಕೆ ಬಿಟ್ಟಿದ್ದಾನೆ; ನಾವು ಆತನಿಗೆ ಉಪಯೋಗವಾಗಬೇಕೋ ಬೇಡವೋ ಎಂಬ ನಿರ್ಧಾರವು ನಮಗೆ ಬಿಟ್ಟಿದೆ. ಎಲೀಷನ ಪ್ರತಿಕ್ರಿಯೆಯು ಸಕಾರಾತ್ಮಕವಾದದ್ದಾಗಿತ್ತು ಮತ್ತು ತಕ್ಷಣದ್ದಾಗಿತ್ತು "ಕೂಡಲೆ ಅವನು ಎತ್ತುಗಳನ್ನು ಬಿಟ್ಟು ಓಡುತ್ತಾ ಬಂದು ನನ್ನ ತಂದೆತಾಯಿಗಳನ್ನು ಮುದಿಟ್ಟು ಬರುವುದಕ್ಕೆ ಅಪ್ಪಣೆಯಾಗಲಿ" ಎಂದು ಕೇಳಿದನು (1 ಅರಸು 19:20ಎ). ಆತ್ಮೀಕ ಹುಣ್ಣು ದೇಶವನ್ನು ತಿನ್ನುತ್ತಿದ್ದ ಕಾರಣದಿಂದ ಆತನ ಆತ್ಮವು ರೋಧಿ

ಸುತ್ತಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ. ಆತನು "ನಾನು ಹೋಗಲು ಸಿದ್ಧನಾಗಿದ್ದೇನೆ!" "ನನ್ನ ತಂದೆತಾಯಿಗಳನ್ನು ಬೀಳ್ಕೊಟ್ಟು ಬರಲು ನನಗೆ ಒಂದು ನಿಮಿಷ ಸಮಯ ಕೊಡು ಎಂದು ಆತನು ಕೇಳುತ್ತಾನೆ!"

ಕೆಲವರು ಹೀಗೆ ಹೇಳಬಹುದು, "ಒಬ್ಬ ಶಿಷ್ಯನು ಯೇಸುವಿಗೆ ಹೀಗೆ ಹೇಳಿದ್ದು ನೆನಪಿದೆ. ಸ್ವಾಮಿ 'ನಾನು ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ನನ್ನ ಮನೆಯರಿಗೆ ಹೇಳಿ ಬರುವುದಕ್ಕೆ ಅಪ್ಪಣೆಯಾಗಬೇಕು ಎಂದನು.' ಆದರೆ ಯೇಸು ಅವನಿಗೆ, 'ಯಾವನಾದರೂ, ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ, ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು' ಎಂದು ಹೇಳಿದನು (ಲೂಕ 9:61, 62). ಎಲೀಷನು ತನ್ನ ತಂದೆ ತಾಯಿಗಳಿಗೆ, ಮುದ್ದಿಟ್ಟು ಬರುವುದಕ್ಕೆ ಅಪ್ಪಣೆಯನ್ನು ಕೇಳಿದ ನಂತರ, ಎಲೀಯನು ಆತನಿಗೆ, ಹೋಗು ನಾನು ನಿನಗೆ ಮಾಡಿದ್ದೇನು? ಎಂದು ಉತ್ತರಕೊಟ್ಟನು (1 ಅರಸು 19:20ಬಿ). ಇವೆರಡು ಪ್ರಕರಣಗಳು ನನಗೆ ಒಂದೇ ರೀತಿಯೆನ್ನಿಸುತ್ತವೆ. ಎಲೀಷನು ಅಷ್ಟೊಂದು ರೀತಿ ಯಲ್ಲಿ ಹೋಗಲು ಸಿದ್ಧನಾಗಿದ್ದನು ಎಂಬುದು ಹೇಳಲು ನನಗೆ ಸಾಧ್ಯವಿಲ್ಲ!"

ಇದರಲ್ಲಿನ ವ್ಯತ್ಯಾಸಗಳು ಅಲ್ಲಿ ಒಳಗೊಂಡಿರುವ ಜನರ ಹೃದಯದ ಮೇಲೆ ಅವಲಂಬಿಸಿದೆ. ಯೇಸುವು ಲೂಕ 9:57-62ರಲ್ಲಿನ, ಮೂವರು ಶಿಷ್ಯರ ಹೃದಯಗಳನ್ನು ನೋಡಿದಾಗ, ಅವರು ನೆವಗಳನ್ನು ಮಾಡುತ್ತಿದ್ದಾರೆ ಎಂದು ಆತನು ತಿಳಿದಿದ್ದನು; ಅವರು ಪೂರ್ಣಾವಧಿಯ ಶಿಷ್ಯತ್ವದಲ್ಲಿ ಒಳಗೊಳ್ಳುವಿಕೆಯಲ್ಲಿ ತಮ್ಮನ್ನು ತಾವು ಒಪ್ಪಿಸಿಕೊಳ್ಳುವ ಇಚ್ಛೆಯನ್ನು ಅವರು ಹೊಂದಿರಲಿಲ್ಲ. ವಿಶೇಷವಾಗಿ, ಮೂವರಲ್ಲಿ ಇಬ್ಬರಿಗೆ ಒಮ್ಮೆಲೆ ಯೇಸುವನ್ನು ಹಿಂಬಾಲಿಸುವ ಯೋಜನೆಯು ಇರಲಿಲ್ಲ ಆದರೆ ಬದಲಾಗಿ ಭವಿಷ್ಯದಲ್ಲಿ ಗುರುತಿಸದಂತಹ ಕೆಲಸಂಗತಿಗಳು ಇರಿಸಬಹುದೇನೋ, ಇನ್ನೊಂದೆಡೆಯಲ್ಲಿ ನಂತರದ ಘಟನೆಯು ತೋರಿಸುವುದೇನೆಂದರೆ ಎಲೀಷನು ಯಾವುದೇ ನೆವಗಳನ್ನು ಒಡ್ಡಲಿಲ್ಲ, ಆದರೆ ಆತನು ತಕ್ಷಣವೆ ಎಲೀಯನನ್ನು ಹಿಂಬಾಲಿಸಲು ಸಿದ್ಧನಾದನು.

ಎಲೀಯನ ಮಾತುಗಳು ದಂಡಿಸುವುದಕ್ಕೆ ಬಳಸಿದ್ದಾಗಿರಲಿಲ್ಲ ಎಂದು ನಂತರದ ಘಟನೆಗಳು ನಾವು ಅರಿತುಕೊಳ್ಳಲು ಸಹಾಯಮಾಡುವುದಾಗಿದೆ.[8] ಎಲೀಯನು ಬಹುಶಃ ಪ್ರತಿಯೊಬ್ಬರಿಗೂ ಬೀಳ್ಕೊಟ್ಟು ಬರುವುದನ್ನು ವಿವರವಾಗಿ ಹೇಳಿಬರುವುದಕ್ಕೆ ಅಪ್ಪಣೆ ಕೊಟ್ಟಿರಬಹುದು. "ನಾನು ನಿನಗೇನು ಮಾಡಿದೆ?" ಎಂದು ಕೇಳುವುದರ ಮೂಲಕ ಎಲೀಯನು "ನಾನಂತೂ ನನ್ನ ಪ್ರವಾದಿಯಾಗಿರುವುದಕ್ಕೆ ಕರೆದಿದ್ದೇನೆ, ಆದರೆ ಇದರ ಅರ್ಥ ನೀನು ನಿನ್ನ ಕುಟುಂಬದೊಡನೆಯಿರುವ ಎಲ್ಲಾ ಸಂಬಂಧಗಳನ್ನು ಕಡಿದುಕೊಳ್ಳಬೇಕೆಂದಲ್ಲ ಎಂದಾಗಿದೆ.[9] ಅವರಿಗೆ ನೀನೇನು ಮಾಡುತ್ತಿ ಎಂಬುದನ್ನು ಹೇಳು ನನ್ನ ಜೊತೆಗೆ ಬಾ ಎಂದು ಹೇಳಿದನು."[10]

> ಎಲೀಷನು ಆತನಿಂದ (ಎಲೀಯನಿಂದ) ಹಿಂದಿರುಗಿ ತಾನು ಊಳುತ್ತಿದ್ದ ಜೋಡಿ ಎತ್ತುಗಳನ್ನು ತೆಗೆದುಕೊಂಡು ಅವುಗಳನ್ನು ವಧಿಸಿ (ಎಲೀಯನು ಕರ್ಮೆಲ್ ಬೆಟ್ಟದಲ್ಲಿ ಎತ್ತುಗಳನ್ನು ಯಜ್ಞದಲ್ಲಿ ಅರ್ಪಿಸಿದ ಹಾಗೆ)[11] ರೆಂಟೆಯ ಕಟ್ಟಿಗೆಯಿಂದ (ಕಟ್ಟಿಗೆಯ ನೇಗಿಲು ಕಡಿವಾಣ) ಮಾಂಸವನ್ನು ಬೇಯಿಸಿ (ಯಜ್ಞವು ಅರ್ಪಿಸಿದ ಮೇಲೆ ಉಳಿದಂತಹದು)[12] ಜನರಿಗೆ ಔತಣಮಾಡಿಸಿದನು (1 ಅರಸು 19:21ಎ).

ಎಲೀಯನು ಔತಣಕೂಟವನ್ನು ಏರ್ಪಡಿಸಿದನು, ಇದು ಆತನು ತನ್ನ ಕುಟುಂಬದವರಿಗೆ ಮತ್ತು ಸ್ನೇಹಿತರಿಗೆ ಕೊಟ್ಟ ಬೀಳ್ಕೊಡುಗೆಯ ಔತಣಕೂಟವಾಗಿತ್ತು. ಇದರ ಮುಖ್ಯವಾದ ಸಂಗತಿ ಎಂದರೆ ಆತನ ಜೀವನವೇ ಆಗಿತ್ತು. ಎಲೀಯನು ತನ್ನ ಸೇತುವೆಗಳನ್ನು ತನ್ನ ಹಿಂದೆಯೇ ಸುಡುತ್ತಾ ಬಂದನು. ಎಫೆಸದಲ್ಲಿನ ಪರಿವರ್ತಿತರಾದ ಮಾಂತ್ರಿಕರು ತಮ್ಮ ಅನೇಕ (ಮಾಟಮಂತ್ರಗಳ) ಪುಸ್ತಕಗಳನ್ನು ಸುಟ್ಟುಬಿಟ್ಟರು (ಅಪೊಸ್ತಲರ ಕೃತ್ಯಗಳು 19:19)

ಎಂಬುದನ್ನು ನಮಗೆ ನೆನಪಿದೆ.

"ಅನಂತರ ಆತನು ಎದ್ದು ಎಲೀಯನನ್ನು ಹಿಂಬಾಲಿಸಿ ಅವನ ಸೇವಕನಾದನು" (1 ಅರಸು 19:21ಬಿ). ಎಲೀಷನು ಹಿಂಜರಿಯಲಿಲ್ಲ. ಆತನು ಅವರನ್ನು ಬೀಳ್ಕೊಟ್ಟನು ಮತ್ತು ಬೆಸ್ತರು ತಮ್ಮ ತಮ್ಮ ಬಲೆಗಳನ್ನು ಬಿಟ್ಟು ಯೇಸುವನ್ನು ಹಿಂಬಾಲಿಸಿದಂತೆ (ಮತ್ತಾಯ 4:20). ಆತನು ಎಲೀಯನನ್ನು ಹಿಂಬಾಲಿಸಿದನು.

ದೇವರು ಎಲೀಷನನ್ನು ಆರಿಸಿದಂತೆ, ನಿನ್ನನ್ನೂ ಕೂಡಾ ಭಿನ್ನವಾದ ಆದರೆ ವಿಶೇಷ ರೀತಿಯಲ್ಲಿ ಆರಿಸಿಕೊಂಡಿದ್ದಾನೆ. ನಿನಗೆ ಜೀವಿತದ ಕೌಶಲ್ಯಗಳನ್ನು, ಮತ್ತು ಸಮಯವನ್ನು ಕೊಡುವ ಮೂಲಕ ಆತನು ನಿನ್ನನ್ನು ಯಾರೊಬ್ಬರೂ ಮಾಡದಂತಹ ಕೆಲಸವನ್ನು ಮಾಡುವಂತೆ ನಿನ್ನ ಸಾಧನವಾಗಿಸುತ್ತಾನೆ.

"ಆದರೆ ನನಗೆ ಯಾವುದೇ ವಿಶೇಷ ಕೌಶಲ್ಯಗಳು ಇಲ್ಲ"; "ನಾನು ಇನ್ನೂ ಬಲು ಚಿಕ್ಕವನು"; "ನಾನು ಬಲು ವೃದ್ಧನಾಗಿದ್ದೇನೆ"; "ನಾನು ನನ್ನ ಕುಟುಂಬವನ್ನು ಮೇಲ ಕ್ಕೆರಿಸುವಲ್ಲಿ ನಾನು ತಂಬಾ ಬಿಜಿಯಾಗಿದ್ದೇನೆ"; "ನನಗೆ ಕರ್ತನಿಗಾಗಿ ಮಾಡಲು ಏನೂ ಇಲ್ಲ" ಎಂದು ನಾನು ಕೆಲ ವಿರೋಧಗಳನ್ನು ಕೇಳಬಹುದು.

ನನ್ನ ದೊಡ್ಡಮಗಳು, ಸಿಂಡಿ, ಮತ್ತವಳ ಗಂಡ ರಿಚರ್ಡ್ ತಮ್ಮ ಮಕ್ಕಳನ್ನು (ನನ್ನ ಮೊಮ್ಮಕ್ಕಳು!) ಅವರು ಮಿಶನರಿಯಾಗಿ ಸೇವೆಮಾಡುತ್ತಿರುವ ರೋಮೆನಿಯಾದ ಬ್ರಾಸೋವ್‌ದಲ್ಲಿ ಬೆಳೆಸುತ್ತಿದ್ದಾರೆ. ಅಲ್ಲಿ ಕಾರ್ಯವು ಕ್ರಿಸ್ತನ ದೇಹದ ಹಿರಿಯ ಸದಸ್ಯರಿಂದ ಅಂದರೆ ತಮ್ಮ ಕೆಲಸದಿಂದ ನಿವೃತ್ತಿ ಹೊಂದಿದವರಿಂದ ಪ್ರಾರಂಭಿಸಲ್ಪಟ್ಟಿದೆ. ಆದರೆ ಕರ್ತನ ಕೆಲಸದಿಂದಲ್ಲ. ಉಳಿದ ಕೆಲಸಗಾರರು, ಯೌವನಸ್ಥರು, ವಿವಾಹಿತ ಅಥವಾ ಅವಿವಾಹಿತ ಸ್ತ್ರೀಯರು, ಮಕ್ಕಳಿದ್ದವರೂ ಮಕ್ಕಳಿಲ್ಲದವರೂ - ಇದ್ದರು ದೇವರ ಕಾರ್ಯದಲ್ಲಿ ಎಲ್ಲರಿಗೂ ಸ್ಥಳವು ಇದೆ.

ವಿರೋಧಿಸುವವರು ಹೀಗೆ ವಿರೋಧಿಸಬಹುದು, "ಅದು ನಮಗೆ ಬಲು ಉಗ್ರವಾ ದ ದ್ದಾಗಿದೆ! ನಾವು ಬೇರನ್ನು ಕಿತ್ತುಹಾಕುವ ಕೆಲಸದ ಬಗೆಗೆ ಮಾತನಾಡುತ್ತಿಲ್ಲ. ಇದರ ಅರ್ಥವು ಇಲ್ಲಿ ಸುತ್ತಲೂ ನಮಗೆ ಮಾಡುವುದಕ್ಕಾಗಿ ಏನೂ ಇಲ್ಲ" ಎಂದಲ್ಲ. ತನ್ನ ಎಪ್ಪತ್ತನೆಯ ವರುಷದಲ್ಲಿರುವ ಮತ್ತು ಆರೋಗ್ಯದಲ್ಲಿ ಕ್ಷೀಣತೆಯಿರುವ ನನ್ನ ಒಬ್ಬ ಸ್ನೇಹಿತನ[13] ಪತ್ರವೊಂದು ನನ್ನ ಮುಂದಿದೆ. ತನ್ನ ಜೀವಿತದ ಅಪನಂಬಿಗಸ್ತಿಕೆಯಿಂದ ಇತ್ತೀಚೆಗಷ್ಟೇ ಕರ್ತನೆಡೆಗೆ ಆತನು ಮರಳಿದ್ದಾನೆ. ಒಂದು ಭಾನುವಾರ, ನಾನು ನನ್ನ ಸಭೆಯ ಸದಸ್ಯರಿಗೆ ವಿಶೇಷವಾದ ಸೇವೆಯನ್ನು ಕಂಡುಹಿಡಿಯಿರಿ ಎಂದು ಸವಾಲನ್ನು ಎಸೆದಾಗ ಈ ಸ್ನೇಹಿತನು ನನಗೆ ದುಃಖದಿಂದ ಮಾತನಾಡಿದನು. "ನಾನು ನನ್ನ ವರ್ಷಗಳನ್ನೂ ಮತ್ತು ವರಗಳನ್ನೂ ಪೋಲುಮಾಡಿದ್ದೇನೆ" ಎಂದು ಆತನು ಹೇಳಿದನು. ಆತನು ಸೇವೆಯನ್ನು ಹುಡುಕುವುದಕ್ಕಾಗಿ ಸಹಾಯಮಾಡಬಯಸಿದ್ದನು; ಅಲ್ಲಿ ಏನಾದರೂ ಇದೆ ಎಂಬುದರಲ್ಲಿ ಆತನಿಗೆ ಖಚಿತತೆಯು ಇಲ್ಲ. ಆತನ ಮನಸ್ಸು ಇನ್ನೂ ಚುರುಕಾಗಿದೆ, ಆತನು ಇಂಗ್ಲೀಷ್ ಭಾಷೆಯ ಮೇಲೆ ಒಳ್ಳೆಯ ಪರಿಣಿತಿಯನ್ನು ಹೊಂದಿದ್ದನು. ಆತನು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಸಂಪಾದಕರಿಗೆ ಬರೆದ ಪತ್ರಗಳನ್ನು ನಾನು ನೋಡಿದ್ದೇನೆ ನಾನು ನಮ್ಮ ಚರ್ಚ ಬುಲೇಟಿನ್ ಬಗೆಗೆ ಒಂದು ಲೇಖನವನ್ನು ಬರೆಯಲು ಆತನಿಗೆ ಹೇಳಿದೆನು ಮತ್ತು ಆತನ ವಿಶೇಷ ವರವನ್ನು ಉಪಯೋಗಿ ಸುವ ಇನ್ನೊಂದು ಮಾರ್ಗವನ್ನು ಯೋಚಿಸಲು ನಾನು ಆತನಿಗೆ ಪ್ರೋತ್ಸಾಹಿಸಿದೆನು. ಈ ಟಿಪ್ಪಣಿಯನ್ನು ಮುಗಿಸುವಾಗ ನಾನು ಈಗಷ್ಟೇ ಸಂಪಾದಕರಿಗೆ ಬರೆದ "ಚರ್ಚ್ ನಾಯಕರಿಗೆ ಅಸಹ್ಯಕರವಾದ ಹೊಡೆದಾಟದ, ಕೀಳುಮಟ್ಟದ ಅಸಹ್ಯಕರವಾದ (ಟಿವಿ) ಪ್ರದರ್ಶನಗಳ ಅವಶ್ಯಕತೆಯು ಇದೆ" ಎಂಬ ತಲೆಬರಹದ ಇತ್ತಿಚಿನ ಆತನ ಪತ್ರವು ನನಗೆ ತಲುಪಿತು. ಕೊನೆಯ ಪ್ಯಾರಾ ಈ ರೀತಿಯಲ್ಲಿ ಪ್ರಾರಂಭವಾಗಿತ್ತು. "ನಾವು ಜನರನ್ನು ಪರಿಗಣಿಸುವವರೆ ಆಗಿದ್ದರೆ, ಹಿಂದಕ್ಕೆ ಹೋಗಿ ಕೂತುಕೊಳ್ಳಿರಿ ಮತ್ತು (ನಮ್ಮ ರಾಷ್ಟ್ರದ) ನಾಶನವನ್ನು ನೋಡಿರಿ,

ಅಥವಾ ನಾವು ಇನ್ನು ಸಾಕೇ ಸಾಕು ಎಂದು ನಿರ್ಧರಿಸುವಂತಹ ಹೊಡೆದಾಟಕ್ಕೆ ಮರಳೋಣವೇ?'' ಈ ಲೇಖನವು ನನ್ನ ಪಾಠಕ್ಕೆ ಪೂರಕವಾಗಿಯೋ ಎಂಬಂತಿತ್ತು!

ಇಲ್ಲಿನ ಮುಖ್ಯ ಪ್ರಶ್ನೆಯು ದೇವರು ನನ್ನನ್ನು ಉಪಯೋಗಿಸುವನೆ? ಎಂಬುದಲ್ಲ. ಇದರ ಉತ್ತರ ''ಹೌದು'' ಎಂದು ಪುನರುಚ್ಛರಿಸುವುದೇ ಆಗಿದೆ! ಪ್ರಶ್ನೆಯು ನೀನು ಆತನಿಂದ ಉಪಯೋಗಿತವಾಗಲು ಸಿದ್ಧನಿದ್ದೀಯಾ? ಎಂಬುಂದೇ.

ಎರಡನೇಯದಾಗಿ, ದೇವರು ಸಿದ್ಧನಾಗಿರುವವನನ್ನು ಬಳಸುವವನಾಗಿದ್ದಾನೆ. ಎಲೀಷನು ತನ್ನ ಕಾರ್ಯವನ್ನು ಪಡೆದಮೇಲೆ, ಆತನು ಎಲೀಯನೊಡನೆ ಪ್ರಯಾಣಿಸಿದನು, ಬಹುಶಃ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವದಕ್ಕಾಗಿ ಸಿದ್ಧನಾಗಲು ಅನೇಕ ವರ್ಷಗಳವರೆಗೆ ಪ್ರಯಾಣಿಸಿದನು. ಆತನು ''ಸಹಾಯಕ ಮಂತ್ರಿಯಂತೆ,'' ''ಕುರಿಚರ್ಮದವನ ಉಪಾಧ್ಯಕ್ಷನ ರೀತಿಯಲ್ಲಿ'' ಅಥವಾ ''ವಂಶಾಧಿಪತಿಯಂತೆ'' ಪ್ರಯಾಣಿಸಲಿಲ್ಲ. ಆತನು ಸೇವಕನಂತೆ ಪ್ರಯಾಣಿಸಿದನು. ''ನಂತರ ಆತನು ಎಲೀಯನನ್ನು *ಹಿಂಬಾಲಿಸಿದನು* ಮತ್ತು ಅನೇಕ ವರ್ಷಗಳವರೆಗೆ (ಸೇವಕನಾಗಿ) ಸೇವೆ ಮಾಡಿದನು'' (1 ಅರಸು 19:21; ಒತ್ತಿ ಹೇಳಿದ್ದು ನನ್ನದು). ಎರಡನೇಯ ಅರಸು 3:11 ಎಲೀಯನ ಕೈಗೆ ನೀರನ್ನು ಕೊಡುತ್ತಿದ್ದನು ಎಂದು ಹೇಳುತ್ತದೆ; ಆತನು ಅತೀ ಕೀಳು ಕೆಲಸವನ್ನು ಮಾಡಿದವನು. ದೇವರು ನಮ್ಮನ್ನು ಉಪಯೋಗಿಸುವಾಗ, ನಾವು ಸೇವಕರಾಗುವುದಕ್ಕೆ ಒಪ್ಪಿಕೊಳ್ಳುವರಾಗಿರಬೇಕು.

ಎಲೀಷನು ಎಲೀಯನ ಸೇವೆ ಮಾಡಿದನು. ಆತನು ತರಬೇತಿಯಲ್ಲಿದ್ದು ಕೆಲಸವನ್ನು ಪಡೆದನು. ಇದಕ್ಕಾಗಿ ಎಲೀಯನು ಆತನಿಗೆ, ''ನಾನು ಇದನ್ನು ಮಾಡುವಾಗ ನನ್ನನ್ನು ನೋಡು ನಂತರ ಪ್ರಯತ್ನಿಸು'' ಎಂದು ಹೇಳಿದನು. ಇದೇ ತರದ ತರ ಬೇತಿಯ ಮೇಲೆ ಅಮೇರಿಕವು ಅನೇಕ ವರ್ಷಗಳಿಂದ ಆತುಕೊಂಡಿದೆ. ಇದೇ ರೀತಿಯಲ್ಲಿಯೇ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಅವು ಚಿಕ್ಕವುಗಳಿರುವಾಗಲೇ ಅವುಗಳಿಗೆ ತರಬೇತಿಯನ್ನು ಕೊಡಲಾಗುತ್ತದೆ. ಅನೇಕ ಸಾರಿ ಇದು ಶ್ರೇಷ್ಟವಾದ ತರಬೇತಿಯಾಗಿದೆ.

2 ಅರಸು 2ರಲ್ಲಿ ನೀರು ಎಲೀಷನಿಗಾಗಿ ಎರಡು ಭಾಗವಾಗಿದ್ದನ್ನು ಕಂಡ ಪ್ರವಾದಿ ಮಂಡಲಿಯವರು ''ಎಲೀಯನಿಗಿದ್ದ ಆತ್ಮವು ಎಲೀಷನ ಮೇಲೆ ಬಂತೆಂದು ಕೂಗಿದರು'' (ವಚನ 15). ಎಲೀಷನು ಎಲೀಯನ ಆತ್ಮವನ್ನು ಎಲೀಯನ ಕಂಬಳಿಯನ್ನು ಎತ್ತಿಕೊಳ್ಳುವ ಮೊದಲೇ ಮತ್ತು ನೀರನ್ನು ಹೊಡೆಯುವ ಮೊದಲೇ ಗ್ರಹಿಸಿಕೊಂಡಿದ್ದನು. ದಿನದಿಂದ ದಿನಕ್ಕೆ ಬೆಂಕಿಯ ಪ್ರವಾದಿಯು ಉತ್ತರದ ರಾಜ್ಯದ ಧೂಳಿನ ಕಷ್ಟದಲ್ಲಿ ನಡೆಯುತ್ತಾ ಮತ್ತು ಬೆಟ್ಟಗಳನ್ನು ಹತ್ತುತ್ತಾ ಆತನು ಎಲೀಯನ ಆತ್ಮದಲ್ಲಿ ಪಾಲನ್ನು ತೆಗೆದುಕೊಂಡನು. ಪ್ರವಾದಿಯಾಗಿ ಆತನು ಈವರೆಗೆ, ಎಲೀಯನೊಂದಿಗೆ ಬಯಲಲ್ಲಿ ಚಳಿಯಿಂದ ಕೂಡಿದ ತಣ್ಣನೆಯ ರಾತ್ರಿಗಳನ್ನು ಹೇಗೆ ಕಳೆದನೆಂಬುದನ್ನು ಆತನು ಕಲಿತಿದ್ದನು. ನಮ್ಮ ಕುಟುಂಬದೊಡನೆ ಅಥವಾ ಬಾಲಕರ ಸೌಟನೊಂದಿಗೆ ಕಾಲ್ನಡೆಗೆ ಮತ್ತು ಶಿಬಿರ ಮಾಡುವದು ಇವು ಬಹುಶಃ ಮೋಜಿನ ಸಾಹಸವಾಗಿವೆ, ಆದರೆ ಕಾಡು ಮನುಷ್ಯನೊಂದಿಗೆ ಗಿಲ್ಯಾದಿನಿಂದ ಕಾಲ್ನಡಿಗೆಯು ಇದು ಇನ್ನೊಂದು ಕಥೆಯಾಗಿರುವದು. ಎಲೀಯನು ಆಡಂಬರದಲ್ಲಿ ನಂಬಿಕೆಯಿಟ್ಟವನಲ್ಲ. ಎಲೀಷನು ನಿಷ್ಟೆಯುಳ್ಳವನು. ಕಂಬಳಿಯನ್ನು ತೆಗೆದುಕೊಳ್ಳುವ ಸಮಯವು ಬಂದಾಗ ಆತನು ಸಿದ್ಧನಾದನು.

ದೇವರು ನಿನಗಾಗಿ ಕಾರ್ಯಮಾಡುತ್ತಾನೆ; ತನ್ನ ಮಹಿಮೆಗಾಗಿ ಆತನು ನಿನಗೆ ವರಗಳನ್ನು ಮತ್ತು ಸಾಮರ್ಥ್ಯಗಳನ್ನು ಕೊಡುತ್ತಾನೆ (ಮತ್ತಾಯ 25). ಇದರ ಅರ್ಥವು ಅವರನ್ನು ಸ್ವಯಂಚಾಲಿತವಾಗಿ ಉಪಯೋಗಿಸುವನು ಎಂದಲ್ಲ. ಇಲ್ಲಿರುವ ಅವಕಾಶಗಳು ವರ್ಷಗಳ ಸಿದ್ಧತೆ - ಒಡೆಯನಿಗಾಗಿ ಸಂಪೂರ್ಣವಾಗಿ ಬಳಿಕೆಯಾಗುವಂತಹದ್ದು ಈ ಮುಂತಾದ ಸಿದ್ಧಪಡಿಸಿಕೊಳ್ಳುವುದನ್ನು ತೆಗೆದುಕೊಳ್ಳುತ್ತದೆ.

ಎಲೀಷನು ಮಾಡಿದಂತೆ ಸಿದ್ಧತೆಗಾಗಿ ಇರುವ ಒಂದು ಉತ್ತಮ ಮಾರ್ಗವೆಂದರೆ: ನಿಜವಾದ

ಸೇವಕರೊಡನೆ ಅವನಿಗೆ ಅಥವಾ ಅವಳಿಗೆ ನೀವು ಮಾಡಬಹುದಾದ ಎಲ್ಲಾ ಸಹಾಯವನ್ನು ಮಾಡುತ್ತಾ ಎಷ್ಟು ಸಾಧ್ಯವೋ ಅಷ್ಟು ಹೊತ್ತು ಕಳೆಯಿರಿ. ನೀವು ಮಾಡುವುದರ ಮೂಲಕ ಕಲಿಯುವಿರಿ. ಕರ್ತನಿಗಾಗಿ ಯಾವ ಸೇವೆಮಾಡುತ್ತೀರಿ ಎಂಬ ಎಲ್ಲದರ ಬಗೆಗೆ ನೀವು ಕಲಿಯುವವರಾಗಿದ್ದೀರಿ.

ಮೂರನೆಯದಾಗಿ, ಕಡೆಯ ತನಕ ಯಾರು ತಾಳಿಕೊಳ್ಳುವವರಾಗಿರುತ್ತಾರೋ ಅವರನ್ನೇ ದೇವರು ಬಯಸುವವನಾಗಿದ್ದಾನೆ. ಎಲೀಯನು ತನ್ನ ಭೂಮಿಯ ಮೇಲಿನ ಕಡೆಯ ದಿನವನ್ನು ಎಲೀಷನೊಂದಿಗೆ ಕಳೆದಳು. ಗಿಲ್ಗಾಲಿನಿಂದ ಬೇತೇಲಿಗೆ ಅಲ್ಲಿಂದ ಯೆರಿಕೋವಿಗೆ ಆತನು ಪ್ರಯಾಣಿಸಿದ ನಂತರ, ಅವರು ಯೊರ್ದನ ನದಿಗೆ ಬಂದರು. ಎಲೀಯನು ತನ್ನ ಕಂಬಳಿಯನ್ನು ತೆಗೆದುಕೊಂಡು, ಸುತ್ತಿದನು, ನೀರನ್ನು ಹೊಡೆದನು.[14] ನೀರು ಇಬ್ಭಾಗವಾಯಿತು ಮತ್ತು ಅವರು ಒಣನೆಲದಲ್ಲಿ ನಡೆದುಹೋದರು (2 ಅರಸು 2:8).

ಅವರು ಇನ್ನೊಂಡೆಯಲ್ಲಿ ಇರುವಾಗ, ಎಲೀಯನು "ನಿನ್ನನ್ನು ಬಿಟ್ಟುಹೋಗುವ ಮೊದಲು ನಾನು ನಿನಗೋಸ್ಕರ ಏನು ಮಾಡಬೇಕೆನ್ನುತ್ತಿ ಹೇಳು" (ವಚನ 9ಎ) ಎಂದು ಹೇಳಿದನು. ಆತನು ತನ್ನ ನಂಬಿಗಸ್ತ ಹಿಂಬಾಲಕನಿಗೆ ಬಹುಮಾನವನ್ನು, ಪ್ರೀತಿಯ ಅನುಭವವನ್ನು ಕೊಡುವ ಇಚ್ಛೆಯುಳ್ಳವನಾಗಿದ್ದನು. ಎಲೀಷನು "ನಿನಗಿರುವ ಆತ್ಮದಲ್ಲಿ ಎರಡು ಪಾಲನ್ನು ಕೊಡು" (ವಚನ 9ಬಿ) ಎಂದು ಕೇಳಿದನು. ಎಲೀಷನು ಎಲೀಯನ ಆತ್ಮೀಕ ಹಕ್ಕುದಾರನಾಗಬೇಕೆಂದು ಬಯಸಿದ್ದನು (ಧರ್ಮೋಪದೇಶ ಕಾಂಡ 21).[15] ಎಲೀಯನು ಎಲೀಷನಿಗೆ ಆತನು ಕೇಳಿದಂತದ್ದು ಎಲೀಯನು ಮೇಲಕ್ಕೇರಿಸಲ್ಪಡುವಾಗ ಆತನು ಎಲೀಯನನ್ನು ನೋಡಿದ್ದಾದರೆ ಆತನ ಕೋರಿಕೆಯು ಈಡೇರಿಸಲ್ಪಡುವುದೆಂದು ಹೇಳಿದನು (ವಚನ 10).

ವಚನ 11ರಲ್ಲಿ, "ಅವರು ಮಾತನಾಡುತ್ತಾ ಮುಂದಕ್ಕೆ ಹೋಗುತ್ತಿರುವಾಗ ..." ಎಂದು ಪ್ರಾರಂಭವಾಗುತ್ತದೆ. ಅವರು ಯಾವುದರ ಬಗೆಗೆ ಮಾತನಾಡುತ್ತಿದ್ದರೆಂಬುದನ್ನು ನೀವು ಬಲ್ಲಿರಾ? ಅವರು ಎಲೀಯನ ಆ ಮಹಾ ದಿನಗಳ ಬಗೆಗೆ ಮಾತನಾಡುತ್ತಿದ್ದರೇ? ಅವರು ಕರ್ಮೆಲ ಬೆಟ್ಟದ ಮೇಲಿನ ಸಂದರ್ಭದ ಬಗೆಗೆ ಮತ್ತು ಇತರ ಅದ್ಭುತವಾದ ಘಟನೆಗಳ ಬಗೆಗೆ ಮಾತನಾಡುತ್ತಿರಬಹುದೇ? ಬಹುಶಃ ಅವರಿಬ್ಬರೂ ಜೊತೆಯಾಗಿರುವಾಗ ನಡೆದ ಹಾಸ್ಯಮಯ ಸಂಗತಿಗಳನ್ನು ನೆನಪಿಸಿಕೊಂಡು ಅವರು ಜೊತೆಯಾಗಿ ನಕ್ಕಿರಬೇಕು.

ಅವರು ಮಾತನಾಡುತ್ತಾ ಮತ್ತು ಹೋಗುತ್ತಾ ಇರುವಾಗ, ಎಲೀಯ ಮತ್ತು ಎಲೀಷರ ನಡುವೆ "ಪಕ್ಕನೇ ಅಗ್ನಿಮಯವಾದ ರಥರಥಾಶ್ವಗಳು ನಡುವೆ ಬಂದು ಅವರನ್ನು ಬಿಂಗಡಿಸಿದವು" (ವಚನ 11ಎ). ಸುಳಿಗಾಳಿಯ ಧೂಳಿನ ಮೂಲಕವಾಗಿ ಹೋದಾಗ, ಹೇಗೋ, ಎಲೀಷನು ಎಲೀಯನನ್ನು ಇನ್ನೂ ನೋಡತ್ತಿದ್ದನು. ಆತನು ನೋಡುತ್ತಿದ್ದಂತೆ, ಎಲೀಯನು ಮೇಲಕ್ಕೆ, ಮೇಲಕ್ಕೆ, ಮೇಲಕ್ಕೆ ದೃಷ್ಟಿಯಿಂದ ದೂರಕ್ಕೆ ಹೋದನು (ವಚನ 11ಬಿ)!

ಎಲೀಯನು ಅದೃಶ್ಯನಾದಂತೆ, ಎಲೀಷನು ತನ್ನ ಮೇಲಂಗಿಯ ಅಂಚನ್ನು ಎರಡೂ ಕೈಗಳಿಂದ ಹಿಡಿದುಕೊಂಡನು ಆ ಬಟ್ಟೆಯನ್ನು ಎರಡು ತುಂಡಾಗಿ ಹರಿದು ಹಾಕಿದನು, ಇದು ದುಃಖದ ಚಿಹ್ನೆಯಾಗಿದೆ.[16] ಆ ಸಂಗತಿಯಲ್ಲಿ, ನಮ್ಮ ಅತೀ ಪ್ರೀಯರಾದವರು ನಮ್ಮಿಂದ ತೆಗೆಯಲ್ಪಟ್ಟಾಗ ಆಗುವ ಹಾಗೆಯೇ ಎಲೀಷನು ಬಹುವಾಗಿ ಸಂತೋಷಗೊಳ್ಳುವುದರ ಬದಲಾಗಿ ದುಃಖದಿಂದ ಕೂಡಿದವನಾಗಿದ್ದನು. ನಂಬಿಗಸ್ತ ಕ್ರೈಸ್ತನು ರೋಗಗ್ರಸ್ತನಾಗಿದ್ದಾದರೆ ಇದು ಅವನ ಅಥವಾ ಅವಳ ಜಯದ ಸಮಯವಾಗಿದೆ, ಆದರೆ ನಮಗೋ ಕಳೆದುಕೊಳ್ಳುವಿಕೆಯ ಸಮಯವಾಗಿದೆ. ನಾವು ಅಳುತ್ತೇವೆ (ಆದರೆ "ಯಾವ ನಿರೀಕ್ಷೆಯೂ ಇಲ್ಲದವರ ಹಾಗೆ" ಎಂಬುವಂತಲ್ಲ).[17]

ಧೂಳು ನಿಂತಮೇಲೆ, ಎಲೀಷನು ಎಲೀಯನನ್ನು ಕರೆದುಕೊಂಡು ಹೋದ ಸ್ಥಳದಿಂದಲೇ ಹೋದನು. ಎಲೀಯನ ಕಂಬಳಿಯು ನೆಲದಲ್ಲಿಯೇ ಬಿದ್ದಿತ್ತು.[18] ನಿಜವಾಗಿ ಪ್ರತಿಯೊಂದು

ಎಲೀಯನಿಗೆ ಸಂಬಂಧಿಸಿದೆಲ್ಲವನ್ನೂ ಆತನ ಉಳಿದ ಎಲ್ಲಾ ಬಟ್ಟೆಗಳು ಆತನಿಂದ ತೆಗೆದುಕೊಳ್ಳಲ್ಪಟ್ಟವು, ಕಂಬಳಿಯು ಮಾತ್ರ ಬಿಡಲ್ಪಟ್ಟಿತ್ತು. ಎಲೀಷನು ಕಂಬಳಿಯನ್ನು ತೆಗೆದುಕೊಂಡನು, ಯೋರ್ದನ್ ಹೊಳೆಯ ಹತ್ತಿರ ತಿರುಗಿ ಬಂದನು.[19] ಆತನ ಮನದಲ್ಲಿ ಭಾವನೆಗಳ ತಿಕ್ಕಾಟವು ಒಂದನ್ನೊಂದು ಬೆನ್ನು ಹತ್ತಿದ್ದವು; ಏನಾಗಬಹುದೆಂಬ ಭಾವೋದ್ವೇಗವು, ಏನಾಗಬಾರದೆಂಬ ಕಾಳಜಿಯು ಮೇಲಿತ್ತು.

"ಮೇಲಣಿಂದ ಬಿದ್ದ ಎಲೀಯನ ಕಂಬಳಿಯನ್ನು ತೆಗೆದುಕೊಂಡು ಯೊರ್ದನ ನದೀ ತೀರಕ್ಕೆ ಬಂದನು" (ವಚನ 13). ಆತನು ಕೆಸರಿನ ಬುಗ್ಗೆಗೆ ಬಂದನು, ಆತನು ಕಂಬಳಿಯನ್ನು ಸುತ್ತಿದನು ಮತ್ತು ನೀರನ್ನು ಹೊಡೆದನು,[20] "ಎಲೀಯನ ದೇವರಾದ ಯೆಹೋವನೆಲ್ಲಿ?" (ವಚನ 14ಎ) ಎಂದು ಕೂಗಿದನು. ದೇವರ ಅಸ್ತಿತ್ವದ ಬಗ್ಗೆ ಎಲೀಷನ ಬಗೆಗೆ ಗಮನವಿತ್ತಿದ್ದನು. ಆತನು ಹೀಗೆ ಕೇಳುತ್ತಿದ್ದನು "ಕರ್ತನೇ ನೀನು ಇಲ್ಲಿ ಇದ್ದೀಯಾ? ನಾನು ಎರಡು ಪಾಲನ್ನು ಪಡೆದೆನಲ್ಲವೇ? ಎಲೀಯನಿಗಾಗಿ ನೀರು ಎರಡು ಭಾಗವಾಗಿದ್ದಂತೆ ನನಗಾಗಿಯೂ ನೀರು ಎರಡು ಭಾಗವಾಗಲಾರದೇ?" ಎಂದಾಗ ಅದು ಆಯತು (ವಚನ 14ಬಿ)!

ಬಹುಶಃ ಯೆರಿಕೋವಿನ ಹತ್ತಿರವಿರುವ ಮೇಲಕ್ಕೆರಿಸಲ್ಪಟ್ಟ ಸ್ಥಳದಿಂದ, ಎಲೀಯ ಮತ್ತು ಎಲೀಷರಿಗೆ ಕೆಲವು ಅಂತರದಲ್ಲಿ ನಿಂತುಕೊಂಡು ಪ್ರವಾದಿ ಮಂಡಲಿಯವರು ಸಂಭವಿಸಿದೆಲ್ಲವನ್ನೂ ನೋಡುತ್ತಿದ್ದರು (ವಚನ 7), ಅಲ್ಲಿ ಸಂಬಂಧಿಸಿದ ಕೆಲವನ್ನು ಅವರು ಹೇಳಬಹುದಿತ್ತು, ಆದರೆ ಅದು ಏನು ಎಂದು ಅವರಿಗೆ ಖಚಿತವಿರಲಿಲ್ಲ. ಎಲೀಯನು ಪಶ್ಚಿಮಕ್ಕೆ ಹೋದಾಗ ಯೊರ್ದನ್ ಹೊಳೆಯು ಭಾಗವಾದದ್ದನ್ನು ಅವರು ನೋಡಬಹುದಿತ್ತು, ಮತ್ತು ಈಗ ಅದು ಅವರಿಗಾಗಿ ಪೂರ್ವದಿಂದ ಬಂದ ಎಲೀಷನಿಗಾಗಿ ಭಾಗವಾಯಿತು. ಸಮಾರೋಪವು ಸ್ಪಷ್ಟವಾಗಿ ಕಾಣುತ್ತದೆ.

> ದೂರದಲ್ಲಿ ನಿಂತಿದ್ದ ಯೆರಿಕೋವಿನ ಪ್ರವಾದಿ ಮಂಡಲಿಯವರು ಇದನ್ನು ಕಂಡು ಎಲೀಯನಿಗಿದ್ದ ಆತ್ಮವು ಎಲೀಷನ ಮೇಲೆ ಬಂದಿತೆಂದು ತಿಳಿದುಕೊಂಡು ಅವನನ್ನು ಎದುರುಗೊಂಡು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು (ವಚನ 15).

ಎಲೀಯನಿಗೆ ದೊಡ್ಡ ಮರ್ಯಾದೆಯನ್ನು ತೋರಿದ[21] ಪ್ರವಾದಿ ಮಂಡಲಿಯವರು ಈಗ ಎಲೀಷನನ್ನು ಗೌರವಿಸುತ್ತಿದ್ದಾರೆ.

ಮರಣ ಹೊಂದದೇ ಪರಲೋಕಕ್ಕೆ ಏರಿಸಲ್ಪಟ್ಟ ಈ ಸಂಗತಿಯು ಈ ಸಮಯಕ್ಕಿಂತ ಮುಂಚೆ ಇಂಥ ಯಾವುದೇ ಸಂಗತಿಗಳು ನಡೆದಿರಲಿಲ್ಲ, ಅವರು ಇದು ಎಲೀಯನಿಗೆ ಸಂಬಂಧಿಸಿದಂತೆ ಇದನ್ನು ನಂಬುವದು ಕಠಿಣವಾದಂತೆ ಕಾಣುತ್ತದೆ. ಎಲೀಯನು ಇಲ್ಲಿ ಗೂಢವಾದ ರೀತಿಯಲ್ಲಿ ಇರುವ ಮೂಲಕ ಮತ್ತು "ಕರ್ತನ ಆತ್ಮವು" ಅಲ್ಲಿ ಇರುವುದನ್ನು ಗೌರವವನ್ನು ಹೊತ್ತುಕೊಂಡಿದ್ದನು (1 ಅರಸು 18:12). ಬಹುಶಃ ದೇವರು ಇನ್ನೊಂದು ಸ್ಥಳಕ್ಕೆ ಅವನನ್ನು ತೇಲಾಡಲು ಇರಿಸಿರಬಹುದೆಂದು ಯೋಚಿಸಿದರು.[22]

> ಅನಂತರ ಅವರು ಅವನಿಗೆ ನಿನ್ನ ಸೇವಕರಾದ ನಮ್ಮಲ್ಲಿ ಐವತ್ತು ಮಂದಿ ಬಲಿಷ್ಟ ಜನರಿದ್ದಾರೆ; ನಿನ್ನ ಯಜಮಾನನ್ನು ಹುಡುಕ ಹೋಗುವದಕ್ಕೆ ಅವರಿಗೆ ಅಪ್ಪಣೆಯಾಗಲಿ. ಯೆಹೋವನು ಅವನನ್ನು ಎತ್ತಿಕೊಂಡು ಹೋಗಿ ಒಂದು ಬೆಟ್ಟದ ಮೇಲಾಗಲಿ ತಗ್ಗಿನಲ್ಲಾಗಲಿ ಇಟ್ಟಿರಬಹುದು (ವಚನ 16ಎ).

ಪ್ರವಾದಿ ಮಂಡಲಿಯವರು ತಮ್ಮನ್ನು ಎಲೀಷನ ಸೇವಕರು ಎಂದು ಹೇಳಿಕೊಳ್ಳುತ್ತಿದ್ದಾರೆ ಮತ್ತು ಅವರು ಎಲೀಯನನ್ನು ಹುಡುಕಲು ಪರವಾನಿಗೆಯನ್ನು ಕೇಳುತ್ತಿದ್ದಾರೆ. ಎಲೀಯನನ್ನು ಹುಡುಕುವದು ವ್ಯರ್ಥವಾದುದೆಂದು ಎಲೀಷನು ಬಲ್ಲವನಾಗಿದ್ದನು. ಮೊದಲೇ ಆತನು "ಬೇಡ" ಎಂದು ಹೇಳಿದನು (ವಚನ 16ಬಿ). ಪ್ರವಾದಿ ಮಂಡಲಿಯವರು ಎಲೀಷನು

ಬೇಸರಗೊಳ್ಳುವವರೆಗೆ ಕೇಳುವುದನ್ನು ಮುಂದುವರೆಸಿದರು (ವಚನ 17ಎ) - ಎಲೀಷನು ಅಂತಿಮವಾಗಿ "ಕಳುಹಿಸುವುದಕ್ಕೆ" (ವಚನ 17ಎ) ಅಪ್ಪಣೆ ಕೊಟ್ಟನು. ಅವರು ಮೂರು ದಿನಗಳವರೆಗೆ ಅವನನ್ನು ಹುಡುಕಿದರು ಮತ್ತು ಎಲೀಯನನ್ನು ಕಾಣಲಿಲ್ಲ (ವಚನ 17ಬಿ).

ಎಲೀಷನು ಅವರಿಗಾಗಿ ಯೆರಿಕೋವಿನಲ್ಲಿ ಕಾದನು. ಅವರು ಮರಳಿದಾಗ "ಹೋಗ ಬೇಡಿರೆಂದು ನಾನು ನಿಮಗೆ ಹೇಳಲಿಲ್ಲವೋ? ಅಂದನು" (ವಚನ 18). ಇದು ಸಿಕ್ಕಿಸಿಕೊಳ್ಳು ವಂತೆ ಕಾಣುತ್ತದೆ "ನೀವು ನನ್ನನ್ನು ನಿಮ್ಮ ನಾಯಕನೆಂದು ಪರಿಗಣಿಸಿದ್ದಾದರೆ, ನೀವು ನನ್ನ ವಾಕ್ಯಗಳನ್ನು ಒಪ್ಪಿಸಿಕೊಳ್ಳಬೇಕು ಎಂಬುದನ್ನು ಕಲಿಯಿರಿ."

ಈ ಅಧ್ಯಾಯದಲ್ಲಿ ಎರಡು ಕಥೆಗಳು ಒಂದರ ನಂತರ ಇನ್ನೊಂದು ಹಿಂಬಾಲಿಸುತ್ತವೆ. ಇವುಗಳು ನಿಜವಾಗಿ ಎಲೀಷನು ಎಲೀಯನು ಹೊಂದಿದ ಶಕ್ತಿಯನ್ನು ಅಂದರೆ ಎರಡು ರೀತಿ ಯಲ್ಲಿ ಆಶೀರ್ವದಿಸುವ ಮತ್ತು ಶಿಕ್ಷಿಸುವ ಶಕ್ತಿಯನ್ನು ಹೊಂದಿದ್ದಾನೆ ಎಂದು ತೋರಿಸುತ್ತವೆ ಎಂದು ಹೇಳುತ್ತಾನೆ. ಮೊದಲ ಕಥೆಯು ಯೆರಿಕೋವಿನ ನೀರನ್ನು ಸ್ವಸ್ಥಮಾಡುವದರ ಬಗಗೆ ಇದೆ. ಎಲೀಷನು ಯೆರಿಕೋವವನ್ನು ಬಿಡುವವನಾಗಿರುವದಕ್ಕೆ ಮುಂಚೆ, ಆ ಜನರು ಆತನಿಂದ ಒಂದನ್ನಾದರೂ ಬಯಸುತ್ತಿದ್ದರು. ಅಲ್ಲಿನ ನೀರು ಕೆಟ್ಟು ಹೋಗಿತ್ತು, ಇದು "ಬಂಜೆತನಕ್ಕೆ" ಕಾರಣವಾಗಿತ್ತು (ವಚನ 19). ಹೊಸ ಮಡಿಕೆ ಮತ್ತು ಉಪ್ಪನ್ನು ಬಳಸುವುದರಿಂದ, ಎಲೀಷನು ನೀರನ್ನು ಶುದ್ಧಗೊಳಿಸಿದನು (ಅಕ್ಷರ ಸಹ, "ವಾಸಿಮಾಡಿದನು") (ವಚನಗಳು 20-22).

ಅಧ್ಯಾಯ 2 ಎರಡು ಹೆಣ್ಣುಕರಡಿಗಳು ದೇವರ ಪ್ರವಾದಿಯನ್ನು ಹಿಯಾಳಿಸಿದ ಅಗೌರವವದಿಂದ ತುಂಬಿದ ನಾಲ್ವತ್ತೆರಡು ಯೌವನಸ್ಥ ಗಂಡು ಮಕ್ಕಳನ್ನು "ಊರಿನ ಹುಡುಗರನ್ನು" ದಾಳಿಮಾಡಿದ ವಿವಾದಾತ್ಮಕ ಕಥೆಯಿಂದ ಮುಗಿಯುತ್ತದೆ. ನಿಜವಾಗಿ, ಕಥೆಯ ಉದ್ದೇಶವು ಎಲೀಯನು ಆಕಾಶದಿಂದ ಬೆಂಕಿಯನ್ನು ತರಿಸುವಾಗ ಹೊಂದಿದ್ದ ಸ್ವಲ್ಪವಾದರೂ ಶಕ್ತಿಯನ್ನು ಹೊಂದಿದ್ದನೂ ಎಂದು ಈ ಕಥೆಯ ತೋರಿಸುತ್ತದೆ. ಈ ಕಥೆಯ ಅರ್ಥವು ನಾವು ಒಂದು ಅಥವಾ ಎರಡು ಕರಡಿಗಳನ್ನು ನಮ್ಮ ಹಿಂದುಗಡೆಯಲ್ಲಿ ಇಟ್ಟುಕೊಳ್ಳಬೇಕೆಂದು, ಸುವಾರ್ತೆಯನ್ನು ಯಾರು ತಮಾಷೆ ಮಾಡುತ್ತಾರೋ ಅವರಕಡೆಗೆ ತಿರುಗಬೇಕೆಂದು ಹೇಳು ವುದಿಲ್ಲ.[23] ಬದಲಾಗಿ, ಇದು ದೇವರನ್ನೂ ಆತನ ವಾಕ್ಯವನ್ನೂ ಗೌರವಿಸಬೇಕೆಂಬುದಕ್ಕೆ ಇದು ಕೊಡಲ್ಪಟ್ಟಿದೆ.

ಈ ಅಧ್ಯಾಯ ಮುಗಿಯುತ್ತಿದ್ದಂತೆ, ಎಲೀಷನ ಕರ್ಮೆಲ್ ಬೆಟ್ಟಕ್ಕೆ ಹೋಗು ವುದನ್ನು ನಾವು ನೋಡುತ್ತೇವೆ - ಬಹುಶಃ ತನ್ನ ಆತ್ಮೀಕತೆಯನ್ನು ಪುನರ್ವೀಕರಿಸಲು ಆತನು ಬಯಸುವವನಾಗಿದ್ದನು[24] (ಸಮಯದಿಂದ ಸಮಯಕ್ಕೆ ನಮ್ಮಲ್ಲಿ ಎಲ್ಲರಿಗೂ ಅವಶ್ಯವಿರುವಂಥದ್ದು). ನಂತರ ಆತನು ತನ್ನ ಮನೆಯಿರುವ (ವಚನ 25), ಸಮಾರ್ಯಕ್ಕೆ ಮರಳಿದನು (2 ಅರಸು 5:3).

ನಾವು ಈ ವಚನಗಳನ್ನು ಓದುತ್ತಿರುವಂತೆ ಮತ್ತು ಮಂದಿನ ಅಧ್ಯಾಯಗಳನ್ನು ಪರೀಕ್ಷಿ ಸುವಂತೆ, ಈ ಎರಡು ಸಂಗತಿಗಳಿಂದ ನಾವು ಪ್ರಭಾವಿತರಾಗುತ್ತೇವೆ. (1) ಎಲೀಷನು "ತನ್ನ ಮೇಲೆ ಬಿದ್ದ ಕಂಬಳಿಯಿಂದ" ಆತನು ಆಶೀರ್ವದಿಸಲ್ಪಟ್ಟನು ಮತ್ತು (2) ಆತನು ತನ್ನ ಕಂಬಳಿಯು ಬೀಳುವ ಮೂಲಕ ಕಠಿಣವಾದ ಜವಾಬ್ದಾರಿಯನ್ನು ಆತನು ಪಡಕೊಂಡನು.

ಗೌರವವನ್ನು ಒದಗಿಸಿದರಲ್ಲಿ ಆತನು ಆಶೀರ್ವದಿಸಲ್ಪಟ್ಟನು. ಪ್ರವಾದಿ ಮಂಡಲಿಯರು ತಮ್ಮನ್ನು ತಾವು ಆತನ ಸೇವಕರು ಎಂದು ಕರೆದುಕೊಳ್ಳುತ್ತಾರೆ ಮತ್ತು ಆತನಿಗೆ ಹುಡುಕುವುದಕ್ಕಾಗಿ ಪರವಾನಿಗೆ ಕೇಳಿಕೊಳ್ಳುತ್ತಾರೆ. ಈ ಸಂಗತಿಯು ಮುಂದಿನ ಅಧ್ಯಾಯಗಳಲ್ಲಿ ಮುಂದುವರೆಯುತ್ತದೆ. 2 ಅರಸು 4:1ರಲ್ಲಿ, ಪ್ರವಾದಿ ಮಂಡಲಿಯವರು ತಮ್ಮನ್ನು "ಸೇವಕರು" ಎಂದು ಕರೆದುಕೊಳ್ಳುತ್ತಾರೆ. 6:1, 2ರಲ್ಲಿ, ಪ್ರವಾದಿ ಮಂಡಲಿಯವರು ಮಕ್ಕಳು ಕಟ್ಟುವುಕ್ಕೆ ಎಲೀಷನ ಪರವಾನಿಗೆಯನ್ನು ಕೇಳುತ್ತಿದ್ದಾರೆ. ನಿಜವಾಗಿಯೂ, ಎಲೀಯನು ಪ್ರವಾದಿಗಳ ಮೇಲೆ ಅಧಿಕಾರವನ್ನು ಎಲೀಯನಿಂದ ಹೊಂದಿದ್ದಾನೆ ಮತ್ತು ಆ

ಅಧಿಕಾರವು ಎಲೀಷನಿಗೆ ಪರಿವರ್ತಿತವಾಯಿತು.

ಎಲೀಷನು ಸಹ ಭಾರವಾದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದನು ಮುಂದಿನ ಹನ್ನೊಂದು ಅಧ್ಯಾಯಗಳು ಎಲೀಷನು ಮಾಡಿದ ದೊಡ್ಡ ಕಾರ್ಯಗಳ ಬಗೆಗೆ ತಿಳಿಸುವಂತವುಗಳಾಗಿವೆ. ಆ ಅಧ್ಯಾಯಗಳಲ್ಲಿ ನಾವು ಎಲೀಷನಿಗಿಂತಲೂ ಯುದಾಯ ಮತ್ತು ಇಸ್ರಾಯೇಲಿನ ರಾಜರುಗಳ ಬಗೆಗೆ ನಾವು ಓದುವವರಾಗಿದ್ದೇವೆ. ಉದಾಹರಣೆಗಾಗಿ, ಅಧ್ಯಾಯ 4ರಲ್ಲಿ, ನಾವು ಎಣ್ಣೆಯ ಅದ್ಭುತವನ್ನು, ಪ್ರವಾದಿಗೆ "ಕೋಣೆಯನ್ನು ಒದಗಿಸಿದವಳಿಗೆ" ಮಗನನ್ನು ಕರುಣಿಸಿದ ಅದ್ಭುತವನ್ನು, "ಹಂಡೆಯಲ್ಲಿನ ವಿಷ" ಮತ್ತು "ಆಹಾರವನ್ನು ದ್ವಿಗುಣಗೊಳಿಸುವ" ಅದ್ಭುತವನ್ನು ನಾವು ನೋಡುತ್ತೇವೆ. ಅಧ್ಯಾಯ 5 ನಾಮಾನನ ವಾಸಿ ಯಾಗುವಿಕೆಯನ್ನು ತಿಳಿಸುವಂತದ್ದಾಗಿದೆ. ಅಧ್ಯಾಯ 6 ಮತ್ತು 7 ರಲ್ಲಿ, ಸಮಾರ್ಯದಲ್ಲಿನ ದುರ್ಭಿಕ್ಷವಾದ ಕ್ಷಾಮದ ನಂತರ ಸಿರಿಯಾದ ಅದ್ಭುತೀಯವಾದ ಸೋಲಿನ ಬಗೆಗೆ ನಾವು ಓದುತ್ತೇವೆ.

ಹೀಗೆ ಕಥೆಯು ಅಧ್ಯಾಯ 13ರಲ್ಲಿನ ಎಲೀಷನ ಮರಣದವರೆಗೂ ಮುಂದುವರೆಯುತ್ತದೆ. ಎಲೀಷನು ದೇವರು ಉಪಯೋಗಿಸಬಹುದಾದ ವ್ಯಕ್ತಿಯಾಗಿದ್ದನು: ಆತನು ಕೊನೆಯವರೆಗೂ ಸಹಿಸಿಕೊಳ್ಳುವಲ್ಲಿ ಸಮರ್ಥನಾಗಿದ್ದವನಾಗಿದ್ದನು.

ದೇವರಿಗೆ ನೀವು ಯಾವಾಗಲೂ ಸಿಕ್ಕುವಂತೆ ಮಾಡಿಕೊಂಡಾಗ, ನೀವು ಆಶೀರ್ವದಿಸಲ್ಪಡುತ್ತೀರಿ. ನಿಮಗೆ ಉನ್ನತವಾದ ಜವಾಬ್ದಾರಿಗಳು ನೀವು ಹೊಂದಿದವರಾಗಿದ್ದೀರಿ. ಕರ್ತನ ಸಭೆಯಲ್ಲಿ[25] ಹಿರಿಯರಾಗಿರುವಂತವರಿಗೆ - ಡೀಕನ್ ಆಗಿರುವಂತವರಿಗೆ ಅಥವಾ ಶಿಕ್ಷಕರಾಗಿರುವಂತವರಿಗೆ, ಅಥವಾ ಕರ್ತನ ಇನ್ನೊಬ್ಬ[26] ಸೇವಕರಾದಂತವರಿಗೆ ಇರುವ ಜವಾ ಬ್ದಾರಿಗಿಂತ ಹೆಚ್ಚಿನದು ಯಾವುದು ಇಲ್ಲ ಎಂದು ಯೋಚಿಸುವವನಾಗಿದ್ದೇನೆ. ಜೀವನದುದ್ದಕ್ಕೂ ನೀನು ಕರ್ತನ ಸೇವೆ ಮಾಡಬಯಸುವುದಾದರೆ, ನೀನು ಕೇವಲ ನಿನ್ನ ಆಶೀರ್ವಾದಗಳನ್ನು ಪಡೆಯುವದಕ್ಕೆ ಸಿದ್ಧನಾಗಿರಬಾರದು ಆದರೆ ನಾವು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಕೂಡಾ ಸಿದ್ಧವಾಗಿರಬೇಕು.

ಇಲ್ಲಿನ ಪ್ರಶ್ನೆಯೆಂದರೆ, ನಾವು ಅಂತ್ಯದವರೆಗೆ ಸಹಿಸಿ ಕೊಳ್ಳುವವರಾಗಿ ರುತ್ತೇವೆಯೋ? ಎಂದು, "ಕಡೆಯವೆಗೂ ತಾಳುವವನು ರಕ್ಷಣೆಯನ್ನು ಹೊಂದುವನು" ಎಂದು ಯೇಸು ಹೇಳಿದನು (ಮತ್ತಾಯ 10:22). ನೆನಪಿಡಿರಿ ಆತನು "ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲ" ಎಂದು ಸಹ ಹೇಳಿದ್ದಾನೆ (ಲೂಕ 9:62).

ಕೊನೆಯತನಕ ತಾಳಿಕೊಳ್ಳುವದು ಸುಲಭವಲ್ಲ. ದೇವರು ನಮ್ಮೊಡನೆ ಇದ್ದು ನಮ್ಮನ್ನು ಬಲಪಡಿಸುವ ವಾಗ್ದಾನಮಾಡಿದ್ದಾನೆ (ಇಬ್ರಿಯ 13:6), ಆದರೆ ಆತನು ಸುಲಭವಾದ ಜೀವನ ನೀಡುವ ವಾಗ್ದನವನ್ನು ಮಾಡಿಲ್ಲ. ನೀನು ದೇವರ ಸ್ತ್ರೀ ಅಥವಾ ಪುರುಷ, ಬಾಲಕ ಅಥವಾ ಬಾಕಿಯರಾಗುವ ಬಗ್ಗೆ ಕೆಲ ಖಚಿತತೆಗಳನ್ನು ಕೊಡುತ್ತೇನೆ. ನೀನು ದೊಡ್ಡ ಜವಾಬ್ದಾರಿಗಳನ್ನೂ ಮತ್ತು ದೊಡ್ಡ ಸವಾಲುಗಳನ್ನೂ ಹೊಂದುವ ಬಗ್ಗೆ ಖಚಿತತೆಯನ್ನು ಕೊಡುತ್ತೇನೆ. "ಬಹು ಸಂಕಟವನ್ನು ತಾಳಿ ದೇವರ ರಾಜ್ಯದೊಳಕ್ಕೆ ಸೇರಬೇಕು" ಎಂದು ಪೌಲನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 14:22). ಈ ಸರಣಿಗಳಲ್ಲಿ ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ನಿರಾಳವಾಗಿರ ಬಯಸುತ್ತೇನೆ, ನಾನು ಕರ್ತನಿಗೆ ನನ್ನ ಜೀವಿತವನ್ನು ಒಪ್ಪಿಸಿಕೊಡುವರಲ್ಲಿ ಒಳಗೊಂಡಿರುವುದರಲ್ಲಿ ನಾನು ಮೃದುವಾಗಿ ಮಾತನಾಡಲು ಪ್ರಯತ್ನಿಸುತ್ತಿಲ್ಲ, ಒಬ್ಬಂಟಿಗನಾಗಿ ನಿಲ್ಲುವದು ಸುಲಭಸಾಧ್ಯವಲ್ಲ. ಇದು ಏಕಾಂಕತತೆಯನ್ನು ತರುತ್ತದೆ.

ಅದು ಚಿತ್ರದ ಒಂದೇ ಒಂದು ಭಾಗವಾಗಿದೆ, ನಿಮ್ಮಗೆ ಇಲ್ಲಿಯೂ ಮತ್ತು ನಿತ್ಯತ್ವದಲ್ಲಿನ ಆಶೀರ್ವಾದಗಳಿಗೂ ಸಹ ಖಚಿತತೆಯನ್ನು ನಾನು ಕೊಡುತ್ತೇನೆ. ಈಗ ನೀವು ದೇವರ ಪ್ರಸನ್ನತೆಯನ್ನೂ ಮತ್ತು ಬಲವನ್ನೂ ಹೊಂದುವಿರಿ, ಮತ್ತು ಕೆಲ ದಿನಗಳಲ್ಲಿ ನೀವು "ನನ್ನ

ಬಲ ನಂಬಿಗಸ್ತನಾದ ಆಳು" ಎಂದು ಹೇಳುವುದನ್ನು ಕೇಳುವಿರಿ (ಮತ್ತಾಯ 25:21, 23; KJV)!

## ಮುಕ್ತಾಯ

ಇದು ಇಸ್ರಾಯೇಲಿನಲ್ಲಿ ದೇವರ ಸ್ತ್ರೀ ಪುರುಷರಿಗೆ ವಿಶೇಷವಾದ ಸಂಗತಿಯಾಗಿದೆ. "ಅಂಥ ವ್ಯಕ್ತಿಯಾಗಿರುವುದಕ್ಕೆ, ನೀನು ಒಪ್ಪುವವನಾಗಿರಬೇಕು ಸಮರ್ಥನಾಗಿರಬೇಕು ಸಿದ್ಧನಾಗಿರಲೇಬೇಕು." ಈ ತರದ ಮನುಷ್ಯನನ್ನು ದೇವರು ಉಪಯೋಗಿತಕ್ಕೆ *ಸಿದ್ಧನಾಗಿರುವುದನ್ನು ಒಪ್ಪಿಕೊಂಡಿದ್ದಕ್ಕಾಗಿ* ಉಪಯೋಗಿಸುತ್ತಾನೆ, ತನ್ನನ್ನು ತಾನು ಸಿದ್ಧಪಡಿಸಿಕೊಳ್ಳುವುದಕ್ಕೆ ಒಪ್ಪಿಸಿಕೊಡುತ್ತಾನೆ, ಮತ್ತು ಕೊನೆಯವರೆಗೂ ತಾಳಿಕೊಳ್ಳು ವುದಕ್ಕೆ *ಸಮರ್ಥನಾಗಿರುತ್ತಾನೆ.* ಇಲ್ಲಿನ ಪ್ರಶ್ನೆಯೆಂದರೆ ನೀನು ಒಪ್ಪಿಕೊಳ್ಳುವುದಕ್ಕೂ, ಮತ್ತು ಸಮರ್ಥನಾಗಿರುವುದಕ್ಕೂ ಸಿದ್ಧನಾಗಿದ್ದೀಯಾ? ಕಂಬಳಿಯು ನಿನ್ನ ಮೇಲೆ ಜಾರಿ ಬೀಳುವುದಕ್ಕೆ ನೀನು ಒಪ್ಪುವವನಾಗಿದ್ದೀಯಾ?

ಎಲೀಯನ ಕಂಬಳಿಯು[27] ಆಕರ್ಷಣೀಯವಾಗಿರಲಿಲ್ಲ, ಅದು ಧೂಳುಮಯವಾಗಿರ ಬಹುದು, ಬೆವರುಮೆತ್ತಿದ್ದೂ, ಮತ್ತು ಬಳಸಿದ್ದೂ ಆಗಿರಬಹುದು - ಆದರೆ ಇದು ಇನ್ನೂ ದೇವರು ಎಲೀಯನಿಗೆ ಮಾಡಲು ಕಳುಹಿಸಿದ ಕೆಲಸಕ್ಕಾಗಿನ ಚಿಹ್ನೆಯಾಗಿದೆ. ಒಂದು ವೇಳೆ ನಿನ್ನ ಮೇಲೆ ಎಲೀಯನು ಕಂಬಳಿಯನ್ನು ಹಾಕಿದ್ದೇ ಆದರೆ ನೀನೇನು ಮಾಡುತ್ತಿದ್ದೀ ನಿನ್ನನ್ನೇ ನೀನು ಕೇಳಿಕೋ. "ಕೆಟ್ಟವಾಸನೆಯ ಆ ಸಂಗತಿಯನ್ನು ನನ್ನಿಂದ ತೆಗೆ" ಎಂದು ಹೇಳುತ್ತಿದೆಯಾ? ಅಥವಾ "ನಾನು ಹೋಗಲು ಸಿದ್ಧನಾಗಿದ್ದೇನೆ! ನಾನು ನನ್ನ ಸೇತುವೆಗಳನ್ನು ಸುಟ್ಟುಹಾಕಲು ಸಿದ್ಧನಾಗಿದ್ದೇನೆ. ದೇವರು ನನ್ನಿಂದ ಏನನ್ನು ಬಯಸುವವನಾಗಿರುತ್ತಾನೋ ಅದನ್ನೇ ನಾನು ಮಾಡಲು ನಾನು ಸಿದ್ಧನಾಗಿದ್ದೇನೆ" ಎಂದು ಹೇಳಲು ಬಯುವವರಾಗಿ ದ್ದೇವೆಯಾ?

ದೇವರು ನಿನ್ನನ್ನು ಬಯಸುವನಾಗಿದ್ದಾನೆ. ಮೊದಲು ನೀನು ಕ್ರೈಸ್ತನಾಗಿರಬೇಕೆಂದು ಬಯಸುವವನಾಗಿದ್ದಾನೆ.[28] ನಂತರ ನೀನು ಕ್ರಿಯಾತ್ಮಕನಾಗಿರಲು, ಧೈರ್ಯದಾಯಕ ಧ್ವನಿಯಾಗಿರಲು ಬಯಸುವವನಾಗಿದ್ದಾನೆ. ನೀನು ದೇವರ ಕಂಬಳಿಯನ್ನು ಸುತ್ತಲೂ ಹೊದ್ದುಕೊಳ್ಳಬೇಕು ಮತ್ತು ದೇವರ ಸೇವೆಗೆ ಮುಂದುವರೆಯಬೇಕೆಂದು ನಾನು[29] ಆಶೀಸುವವನೂ ಪ್ರಾರ್ಥಿಸುವವನೂ ಆಗಿದ್ದಾನೆ!

---

ಟಿಪ್ಪಣೆಗಳು

[1]ಮತ್ತು ಇವೆರಡೂ ಲ್ಯಾಟಿನ ಪದದಿಂದ ಬಂದ ಅದೇ ತರದ ಶಬ್ದಗಳಾಗಿವೆ. [2]ಇದು ಕೇವಲ ಮನಸ್ಸಿನಲ್ಲಿ ಅಲೇ ಬರುವಂತ ಎಂದು ಪದ್ಯಮಯ ಪದ ಪುಂಜವಾಗಿದೆ. ಇದು "ನಿಲುವಂಗಿಯನ್ನೂ" ಅಥವಾ ಕತ್ತಲೆಯನ್ನು ಹೊದಿಸುವಂತದ್ದನ್ನೂ ಸೂಚಿಸುವುದಾಗಿದೆ. [3]*Funk and Wagnalls Dictionary*, vol. 1 (1951), s.v. "mantle." [4]ಯೋನ 3:6. ಆಕಾನನಿಂದ ಕದಿಯಲ್ಪಟ್ಟ ಬೆಬಿಲೋ ನಿಯ ಉಡಿಗೆ ಇನ್ನೊಂದು ಉದಾಹರಣೆಯಾಗಿದೆ (ಯೆಹೋಶುವ 7:21, 24); ಈ ಕಂಬಳಿಯು ಬಹುಶಃ ಉಡಿಗೆಗಳನ್ನು ನೋಡುವಂತದ್ದಾಗಿತ್ತು. [5]ಒಂದು ವೇಳೆ ನೀವು ಕಂಬಳಿಯನ್ನು ನಿಮ್ಮ ಬೋಧ ನೋಪಕರಣವನ್ನಾಗಿ ಬಳಸಿದ್ದಾದರೆ (ದೃಶ್ಯ ಶ್ರವಣ ಟಿಪ್ಪಣೆ ನೋಡಿರಿ), ನೀವು ಕಂಬಳಿ ಎಂದರೇನು ಎಂದು ಚರ್ಚಿಸಿದ್ದನ್ನು ಪ್ರಚುರಪಡಿಸಿರಿ. ಈಗ ಅದನ್ನು ನಿಮ್ಮ ಭುಜದ ಸುತ್ತಲೂ ಹಾಕಿಕೊಳ್ಳಿರಿ. [6]ನಾವು ತಿಳಿದಂತೆ, ಎಲೀಯನು ಹೋದ ಮೇಲೆ ಕಂಬಳಿಯು ಅಕ್ಷರ ಸಹ ಎಲೀಷ ಎಂಬ ವ್ಯಕ್ತಿಯ ಮೇಲೆ ಬೀಳಲಿಲ್ಲ, ಆದರೆ ಅಧಿಕಾರ ಮತ್ತು ಜವಾಬ್ದಾರಿಯ ಕಂಬಳಿಯು ಅಲ್ಲಿ ಆ ಸಮಯದಲ್ಲಿ ಆತನ ಮೇಲೆ ಬಿದಿತ್ತು ಎಂದು ಸೂಚಿಸುವುದಾಗಿದೆ. ಯಾರೊಬ್ಬರ ಮೇಲೆ "ಕಂಬಳಿಯು ಬೀಳುವುದು" ಇದೊಂದು ಸಾಮಾನು ಭಾಗವಾಗಿದ್ದು ಇದು ಎಲೀಯನು ಎಲೀಷನ ಮೇಲೆ ಕಂಬಳಿಯನ್ನು ಒಗೆದಾಗ ಆತನನ್ನ ಪ್ರವಾದಿಯಾಗಿಸುವದಕ್ಕೆ ಕರೆದದ್ದರ ಸೂಚಸುವುದಾಗಿದೆ. [7]ಎಲೀಯನ ಕಾರ್ಯವನ್ನು ಮೂಕನಾಟಕದಂತೆ ಪ್ರದರ್ಶಿಸಲು ಕಂಬಳಿಯನ್ನು ದೃಶ್ಯ ಶ್ರವಣದ ಸಾಧನದಂತೆ ನೀವು ಉಪಯೋಗಿ

ಸಬಹುದು. ಎಲೀಷನು ಪ್ರವಾದಿಯಾಗಿರುವುದರ ಬಗೆಗೆ ಗಂಭೀರ ವಾಗಿದ್ದನೋ ಎಂದು ಪರೀಕ್ಷಿಸಲು ಬಯಸುವವರಾಗಿರುತ್ತಾರೆ. [8]ಇದು ಲೂಕ 9ರಲ್ಲಿ ಯೇಸು ಒಬ್ಬ ಮನುಷ್ಯನೊಡನೆ ಮಾತನಾಡಿದ ಮಾತಿಗೆ ಸಮಾನವಾಗ ಬಹುದು. [9]ಇದು ಪೂರ್ಣಾವಧಿಯ ದೇವರ ಸೇವಕರು ಯೋಚಿಸಬೇಕಾದ ಬಲು ಮಹತ್ವದ ಅಂಶವಾಗಿದೆ. [10]ಎಲೀಯನ ಮಾತಿನ ದ್ವಂದ್ವಾರ್ಥಕ್ಕೆ ಇತರ ಅರ್ಥವೂ ಇರಬಹುದಾಗಿದೆ. ಸ್ಟ್ಯಾಂಡರ್ಡ್ ಕಾಮೆಂಟ್ರೀಸನ್ನು ಮತ್ತು ಮುಂಚಿನ ಪುಸ್ತಕದಲಿನ ದೇವರು ಹೇಗೆ "ಹತಾಶೆಯ ಪ್ರಕರಣವನ್ನು ನಿವಾರಿಸಿದನು" ಎಂಬುದನ್ನೂ ನೋಡಿರಿ.

[11]"ತ್ಯಾಗಮಾಡಲ್ಪಟ್ಟ" ಎಂಬ ಭಾಷಾಂತರವಾದ ಪದದ ಸರಳ ಅರ್ಥವು "ಸಂಹರಿಸಿದ" ಎಂದಾಗಿದೆ. ಬಹುಶಃ ಅದನ್ನೇ ಎಲೀಯನು ಮಾಡಿದ್ದಾಗಿರಬಹುದು. [12]ಬಲಿಗಳಲ್ಲಿ, ಕೇವಲ ಪ್ರಾಣಿಯ ಒಂದ ಭಾಗವು ಮಾತ್ರ ಯಜ್ಞದಲ್ಲಿ ಅರ್ಪಿಸ್ಪಡುತ್ತಿತ್ತು. ಉಳಿದ ಭಾಗವು ಪೂಜಾರಿಗಳಿಗೆತಿನ್ನಲು ಉಳಿಸಲ್ಪಡುತ್ತಿತ್ತು. [14]ಟೆಕ್ಸಾಸ್‌ನ ಕ್ಯಾಲೆಬೋರ್ನನಿನ ಆ್ಯಲನ್ ಮೋರಿಸ್. [15]ಒಂದು ಕಂಬಳಿಯನ್ನು ದೃಕ್ ಶ್ರವಣ ಸಾಧನದಂತೆ ಎಲೀಯನ ನಕಲು ಮಾಡುವಂತೆ ನೀವು ಉಪಯೋಗಿಸಬಹುದು (1 ಅರಸು 20, 22; 2 ಅರಸು 2:3, 5, 7; ಮುಂತಾದವುಗಳು). [16]ಆದಿಕಾಂಡ 37:29; 2 ಸಮುವೇ 13:19; ಯೋಬ 1:20; 2:12; ಇತ್ಯಾದಿ. [17]1 ಥೆಸಲೋನಿಕ 4:13 ಹೋಲಿಸಿರಿ. [18]ನೀವು ಕಂಬಳಿಯನ್ನು ದೃಶ್ಯ ಶ್ರವಣ ಸಾಧನದಂತೆ ಬಳಸಿದ್ದಾದರೆ, ಅದನ್ನು ಮೆಲಣಿಂದ ನೆಲದ ಮೇಲೆ ಹಾಕಿರಿ. [19]ಕಂಬಳಿಯನ್ನು ತೆಗೆದುಕೊಳ್ಳಿರಿ, ನಿಮ್ಮ ಭುಜದ ಮೇಲೆ ಹೊದಿಸಿಕೊಳ್ಳಿರಿ. [20]ನೀವು ಕಂಬಳಿಯನ್ನು ದೃಶ್ಯ ಶ್ರವಣ ಸಾಧನದಂತೆ ಬಳಸಿದ್ದಾದರೆ, ಎಲೀಯನ ಕಾರ್ಯವನ್ನು ಮೂಕನಾಟಕದಂತೆ ಅಭಿನಯಿಸಿರಿ.

[21]ಒಂದು ಪುರಾವೆಯು ಎಂದರೆ ಅವು ಎಲೀಯನೊಡನೆ ಮಾತನಾಡಲು ಹಿಂಜರಿಯುತ್ತಿದ್ದರು, ಅದರ ಬದಲಾಗಿ ಆತನು ತನ್ನ ಸೇವಕನೊಡನೆ ಮಾತನಾಡಿದನು (2 ಅರಸು 2:3, 5). [22]ಫಿಲಿಪ್ಪಿನ ಆತ್ಮದಿಂದ ಅಜೋತಿನಲ್ಲಿ "ಎತ್ತಿಕೊಂಡು ಹೋಗಲ್ಪಟ್ಟನು" (ಅಪೊಸ್ತಲರ ಕೃತ್ಯಗಳು 8:39, 40). [23]"ನಾನು ವೃದ್ಧನಾಗಿದ್ದೇನೆಂದು ಯಾರು ಹೇಳಿದರು?" ಎಂಬ ಪಾಠವನ್ನು ನೋಡಿರಿ. [24]ಇದು ಎಲೀಷನಿಗೆ ಪ್ರೀಯವಾದ ಸ್ಥಳ ಎಂದು ಕಾಣುತ್ತದೆ (ಗಮನಿಸಿರಿ 2 ಅರಸು 4:25). [25]ಯಾಕೋಬ 3:1ರಲ್ಲಿ ಈ ಅಂಶವು ಯಾಕೋಬನು ಹೇಳಿದ ಅಂಶವಾಗಿದೆ. [26]ಇಬ್ರಿಯ 13:17. [27]ನೀವು ಕಂಬಳಿಯನ್ನು ದೃಕ್ ಶ್ರವಣ ಸಾಧನದಂತೆ ಬಳಸಿದ್ದಾದರೆ, ಅದನ್ನು ನೀವು ಮುಚ್ಚಿದಂತೆ ಹಿಡಿಯಿರಿ. [28]ಕ್ರೈಸ್ತನಾಗುವುದಕ್ಕೆ ಯೇಸುವು ದೇವರ ಮಗನೆಂದು ನಂಬುವದು ಮತ್ತು ದೀಕ್ಷಾಸ್ನಾನ ಹೊಂದುವದು (ನೀರನಲ್ಲಿ ಮುಳುಗಿಸುವುದು) ಇವು ಪಾಪ ಕ್ಷಮಾಪಣೆಗಾಗಿ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; ರೋಮಾಪುರ 10:9, 10; ಅಪೊಸ್ತಲರ ಕೃತ್ಯಗಳು 22:16) ನಿಮಗೆ ಅವಶ್ಯ ಇದೆ. [29]ನೀವು ಕಂಬಳಿಯನ್ನ ದೃಶ್ಯ ಶ್ರವಣ ಸಾಧನದಂತೆ ಬಳಸಿದ್ದಾದರೆ, ಅದನ್ನು ನಿಮಮ ಭುಜದ ಸುತ್ತಲೂ ಹೊದ್ದುಕೊಳ್ಳಿರಿ.

---

## ಪಾಠದ ರೂಪರೇಶೆಗಳು

**ಪೀಠಿಕೆ**

A. ಜೀವನದಲ್ಲಿ ಅನೇಕ ಸ್ಥಾನಗಳು ಗುರುತಿಸುವಿಕೆಯ ಮತ್ತು ಅಧಿಕಾರಗಳ ವಿಶೇಷ ಚಿಹ್ನೆಗಳನ್ನು ಹೊಂದಿರುತ್ತವೆ. ಎಲೀಷನಿಗೆ ಅದು ಕಂಬಳಿಯಾಗಿತ್ತು (1 ಅರಸು 19:13, 19; 2 ಅರಸ 2:8). ಅದು ಚರ್ಮ ಕೂದಲಿಂದ, ಒರಟಾದ ವಸ್ತುವಿನಿಂದ ಮಾಲ್ಪಟ್ಟದ್ದು ಆಗಿತ್ತು (2 ಅರಸು 1:8; 2:8; ಜೆಕರ್ಯ 13:4; ಮತ್ತಾಯ 3:3, 4).

B. ನಮ್ಮ ಕೊನೆಯ ಪಾಠದಲ್ಲಿ, ಕಂಬಳಿಯು ಎಲೀಯನು ಸುಳಿಗಾಳಿಯಲ್ಲಿ ಏರಿಸಲ್ಪಟ್ಟಾಗ ಕಂಬಳಿಯು ಎಲೀಷನ ಮೇಲೆ ಬಿದ್ದಿತು. ನಾವು ನಮ್ಮ ಸರಣಿಯನ್ನು "ಕಂಬಳಿಯು ನಿನ್ನ ಮೇಲೆ ಜಾರಿ ಬೀಳಲಿ" ಎಂಬ ಈ ಆಹ್ವಾನದಿಂದ ಮುಗಿಸುವ.

I. ದೇವರಿಗೆ ಇನ್ನೂ ಇಸ್ರಾಯೇಲಿನಲ್ಲಿ ತನಗೆ ಒಬ್ಬ ಮನುಷ್ಯನ ಅವಶ್ಯಕತೆಯು ಇದೆ.

A. ಎಲೀಯನ ರೂಪಾಂತರದ ನಂತರ ದೇವರಿಗೆ ಇನ್ನೂ ಇಸ್ರಾಯೇಲಿನಲ್ಲಿ ಒಬ್ಬ

ಮನುಷ್ಯನ ಅವಶ್ಯಕತೆಯು ಇತ್ತು.

1. ಎಲೀಯನು ಶ್ರೇಷ್ಟವಾದ ಕಾರ್ಯವನ್ನು ಮಾಡಿದನು.
   a. ಎಲೀಯನು ಈ ದೃಷ್ಯಕ್ಕೆ ಬರುವ ಮುನ್ನ ಯೋಚಿಸದಂತಹ ಮಾತಿಲ್ಲದ ಸೇವೆಯು ಯೆಹೋವನಿಗೆ ಆಗುತ್ತಿತ್ತು; ಆದರೆ ಆತನು ಬಂದ ನಂತರ ಯೆಹೋವನ ಪ್ರವಾದಿಗಳು ಧೈರ್ಯವಾಗಿ ಮಾತನಾಡತೊಡಗಿದರು ಎಂಬುದನ್ನು ನೋಡುತ್ತೇವೆ, ಯೆಹೋವನ ಹೆಸರಿನಲ್ಲಿ ಮೊರೆಯಿಡಲಾಯಿತು, ಮತ್ತು ಪ್ರವಾದನಾ ಮಂಡಲಿಗಳು ಅಸ್ತಿತ್ವದಲ್ಲಿ ಬಂದವು.
   b. ಆಹಾಬನ ಮಗನು ಆಹಾಬನು ನಿಲ್ಲಿಸಿದ ವಿಗ್ರಹದ ಸ್ಥಂಬಗಳನ್ನು ಕೆಡವಿಹಾಕಿದನು (2 ಅರಸು 3:2).
2. ಇದರ ಅರ್ಥವು ಪ್ರತಿಯೊಂದು ಮಾಡಲ್ಪಟ್ಟದ್ದು ಎಂದರ್ಥವಲ್ಲ. ಬಾಳನ ಆರಾಧನೆಯು ಮುಂದುವರೆಸಲ್ಪಟ್ಟಿತು (2 ಅರಸು 10:18 ಹೋಲಿಸಿರಿ), ಮತ್ತು ಕೆಟ್ಟತನವು ಹೆಚ್ಚಿತು.

B. ಇಂದು ದೇವರಿಗೆ ಇಸ್ರಾಯೇಲಿನಲ್ಲಿ ತನ್ನ ಜನರ ಅವಶ್ಯಕತೆಯು ಇದೆ.

1. ಹಿಂದಿನ ಜೀವಿತದಲ್ಲಿ ಅನೇಕವು ಮಾಡಲ್ಪಟ್ಟಿತು.
   a. ಕರ್ತನ ಸಭೆಯಲ್ಲಿ ಸಭೆಯು ಜಗತ್ತಿನ ಸತ್ತಲೂ ಅಸ್ತಿತ್ವದಲ್ಲಿದೆ.
   b. ಸುವಾರ್ತೆಯು ಜಗತ್ತಿನಲ್ಲಿ ಹೆಚ್ಚಾಗಿ ಸಾಗುತ್ತಿದೆ.
2. ಕಾರ್ಯವು ಮುಗಿಯಿತು ಎಂದು ನಾವು ಯೋಚಿಸಬಾರದು.
   a. ಆತ್ಮಗಳು ಇನ್ನೂ ಕತ್ತಲೆಯಲ್ಲಿವೆ.
   b. ಸಮೃದ್ಧಿಯ, ಬಲದ ಮತ್ತು ನಮ್ಮ ಕಡೆಗೆ ಸ್ವಾಧೀನವಾದ ಸಂಗತಿಗಳ ಆರಾಧನೆಗಳ ರೂಪದ "ಬಾಳನ ಆರಾಧನೆಯು" ಇನ್ನೂ ನಮ್ಮೊಂದಿಗೆ ಇದೆ (ಇಬ್ರಿಯ 13:5).
   c. ಲೈಂಗಿಕ ಅನೈತಿಕತೆಯಂತಹ ಅಸಹ್ಯವಾದ ಕೀಳು ಕೃತ್ಯಗಳು ಇಲ್ಲಿವೆ (ಗಲಾತ್ಯ 5:19-21).
   d. ನಮ್ಮ ರಾಷ್ಟ್ರದಲ್ಲಿ ಹೃದಯದ ನೋವಿನಿಂದ ಕೀಳುತನದಿಂದ ಕೂಡಿದೆ. ಸಾವಿರಾರು ಕುಟುಂಬಗಳು ನಾಶನದಲ್ಲಿವೆ.

II. ದೇವರಿಗೆ ಇನ್ನೂ ಇಸ್ರಾಯೇಲಿನಲ್ಲಿ ತನ್ನ ವಿಶೇಷ ಜನರನ್ನು ಬಳಸಬಹುದಾಗಿದೆ.

A. ದೇವರು ಸಿದ್ಧರಾಗಿರುವಂತರವರ್ನು ಉಪಯೋಗಿಸಲು ಬಯಸುತ್ತಾನೆ.

1. ಎಲೀಯನು ಎಲೀಷನ ಮೇಲೆ ತನ್ನ ಕಂಬಳಿಯನ್ನು ಹಾಕಿದಾಗ ಆತನು ಪ್ರತಿಕ್ರಿಯಿಸಲು ಸಿದ್ಧನಾಗಿದ್ದನು (1 ಅರಸು 19:15, 16, 19-22).
2. ಒಂದು ರೀತಿಯಲ್ಲಿ, ದೇವರು ನಿನ್ನನ್ನು ಸಹ ಇಸ್ರಾಯೇಲಿನಲ್ಲಿ ತನ್ನ ಒಬ್ಬ ಸ್ತ್ರೀಪುರುಷರನ್ನಾಗಿ ಆರಿಸಿಕೊಂಡಿದ್ದಾನೆ. ನಿನ್ನ ಸಮಯ, ನಿನ್ನ ವರಗಳು ಮತ್ತು ನಿನ್ನ ಜೀವಿತವನ್ನು ಆತನಿಗಾಗಿ ಸಮರ್ಪಿಸಿಕೊಂಡಿರ ಬೇಕೆಂದು ಆತನು ಬಯಸುವವನಾಗಿದ್ದಾನೆ. ಆತನಿಂದ ಉಪಯೋಗಿತ ವಾಗುವುದಕ್ಕೆ ನೀನು ಸಿದ್ಧನಾಗಿದ್ದೀಯಾ?

B. ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುವುದಕ್ಕೆ ಒಪ್ಪಿಗೆ ಇರುವವರನ್ನು ದೇವರು ಬಯಸುವವನಾಗಿದ್ದಾನೆ.

1. ಎಲೀಷನು ಆ ದಿವ್ಯವಾದ ನಿಯೋಗವನ್ನು ಪಡೆದುಕೊಂಡು ನಂತರ ಅನೇಕ ವರ್ಷಗಳವರೆಗೆ ಎಲೀಯನ ಜೊತೆಯಲ್ಲಿ ಪ್ರಯಾಣಿಸುವುದರ ಮೂಲಕ ಆತನು ಪ್ರವಾದಿಯ ತರಬೇತಿಯನ್ನು ಪಡೆದನು (1 ಅರಸು

18:21; 2 ಅರಸು 3:11). ಹೀಗೆ ಎಲೀಯನು ಮೇಲಕ್ಕೆರಿಸಲ್ಪಟ್ಟಾಗ ಮತ್ತು ಆತನ ಕಂಬಳಿಯು ಎಲೀಷನ ಮೇಲೆ ಜಾರಿ ಬಿದ್ದಾಗ ಆತನು ಎಲೀಯನ ಕಾರ್ಯವನ್ನು ಹೊತ್ತುಕೊಳ್ಳಲು ಸಿದ್ಧನಾದನು.

2. ದೇವರು ನಿಮಗೆ ಸಾಮರ್ಥ್ಯದಿಂದ ಮಾಡಲು ಈ ಕಾರ್ಯವನ್ನು ಕೊಡುತ್ತಾನೆ, ಆದರೆ ಕಾರ್ಯವನ್ನು ಮಾಡಲು ಸಿದ್ಧತೆಯು ಬೇಕು.

C. ಕೊನೆಯವರೆಗೂ ತಾಳಿಕೊಳ್ಳುವವರನ್ನು ದೇವರು ಬಯ ಸುವವನಾಗಿದ್ದಾನೆ.

1. ಎಲೀಷನು ವೈಯಕ್ತಿಕವಾಗಿ ಒಂದೇ ತೆರೆನಾಗಿ ಇದ್ದಂತಹ ವ್ಯಕ್ತಿಯಾಗಿದ್ದನು. ಎಲೀಯನು ತನ್ನ ಜೀವಿತದ ಕೊನೆಯ ದಿನದಲ್ಲಿ ತಾನು ನಿಲ್ಲಬೇಕಾದ ಪ್ರತಿಯೊಂದು ಸ್ಥಳದಲ್ಲಿಯೂ ಆತನನ್ನು ಬಿಡಬೇ ಕೆಂದು ಪ್ರಯತ್ನಿಸಿದನು, ಎಲೀಷನು ನಿರಂತರ ವಾಗಿ ಎಲೀಯನೊಡನೆ ಉಳಿದನು. ಇದರ ಪ್ರಭಾವವಾಗಿ, ಎಲೀಷನು ಆತನ ಮೇಲೆ ಬಂದ "ಎಲೀಯನ ಆತ್ಮದಿಂದ" ಬಹುಮಾನಿಸಲ್ಪಟ್ಟನು (2 ಅರಸು 2:8-18), ತಮ್ಮ ಕಾರ್ಯವನ್ನು ಮುಂದುವರಿಸುವುದಕ್ಕೋಸ್ಕರ, ಕೊನೆಯವರೆಗೂ ನಂಬಿಗಸ್ತರಾಗಿರುವುದಕ್ಕೋಸ್ಕರ ಇದು ಅವಶ್ಯವಾದದ್ದು ಆಗಿದೆ.

   a. ಎಲೀಯನ ಕಂಬಳಿಯು ಎಲೀಷನ ಮೇಲೆ ಬೀಳುವ ಮೂಲಕ ಆತನು ಆಶೀರ್ವಾದಗಳನ್ನು ಪಡೆದನು. ಎಲೀಯನಿಗೆ ತೋರಿಸಲ್ಪಟ್ಟ ಗೌರವಗಳು ಈಗ ಆತನಿಗೆ ತೋರಿಸಲ್ಪಟ್ಟವು (2 ಅರಸು 2:15, 16; ಹೋಶಿಸಿ 4:1; 6:1, 2).

   b. ಆತನು ಅವಶ್ಯಕತೆಯುಳ್ಳವರಿಗೆ ಸಹಾಯಿಸಲು ಮತ್ತು ದೇವರೊಂದಿಗೆ ಅಗೌರವದೊಂದಿಗೆ ಇರುವವರಿಗೆ ಶಿಕ್ಷಿಸಲು ಜವಾಬ್ದಾರಿಗಳನ್ನು ಆತನು ಪಡೆದಿದ್ದನು (ವಚನಗಳು 19-25).

2. ದೇವರು ನಮ್ಮನ್ನು ಉಪಯೋಗಿಸಿದ್ದೇ ಆದರೆ ನಾವೂ ಸಹ ಒಂದೇ ತೆರೆನಾಗಿ ಇರುವ ವ್ಯಕ್ತಿಯಾಗಿರಬೇಕು.

   a. ನಾವು ಇಸ್ರಾಯೇಲಿನ ದೇವರ ಸ್ತ್ರೀ ಮತ್ತು ಪುರುಷರಂತೆ ಇಲ್ಲಿ (ಇಬ್ರಿಯ 13:6) ಮತ್ತು ನಿತ್ಯತ್ವದಲ್ಲಿ (ಮತ್ತಾಯ 25:21, 23). ನಾವು ಹೇಗೋ ಅತ್ಯಮೂಲ್ಯ ವಾದ ಜವಾಬ್ದಾರಿಗಳನ್ನು ಹೊಂದಿ ದ್ದೇವೆ (ಯಾಕೋಬ 3:1; ಇಬ್ರಿಯ 13:17; ಅಪೊಸ್ತಲರ ಕೃತ್ಯಗಳು 14:22; ಮುಂತಾದವುಗಳು).

   b. ದೇವರು ನಮ್ಮನ್ನು ಕೊನೆಯವರೆಗೂ ನಮ್ಮನ್ನು ಉಪಯೋಗಿ ಸಿಕೊಳ್ಳಲಿ (ಮತ್ತಾಯ 10:22; ಲೂಕ 9:62).

**ಮುಕ್ತಾಯ**

A. "ಒಪ್ಪುವವನಾಗಿರಬೇಕು ಸಮರ್ಥನಾಗಿರಬೇಕು ಸಿದ್ಧನಾಗಿರಲೇಬೇಕು" ಇವುಗಳು ಅಂಥ ವ್ಯಕ್ತಿಯಾಗಿರುವವನನ್ನು ವರ್ಣಿಸುವಂತ ಪದಗಳಾಗಿವೆ. ಇವು ದೇವರು ಉಪಯೋಗಕ್ಕೆ ಸಿದ್ಧನಾಗಿರುವ ಈ ತರದ ಮನುಷ್ಯನನ್ನು ವರ್ಣಿಸುವಂತ ಪದಗಳಾಗಿವೆ.

B. ಎಲೀಯನು ಕಂಬಳಿಯನ್ನು ಹಾಕಿದ್ದೇ ಆದರೆ ನೀನೇನು ಮಾಡುತ್ತೀದ್ದೀ ನಿನ್ನನ್ನೇ ನೀನು ಕೇಳಿಕೋ? ನೀನು ದೇವರ ಕಂಬಳಿಯನ್ನು ಸುತ್ತಲೂ ಹೊದ್ದುಕೊಳ್ಳ ಬೇಕು ಮತ್ತು ದೇವರ ಸೇವೆಗೆ ಮುಂದುವರೆಯಬೇಕೆಂದು ನಾನು ಆಶೀಸುವವನೂ ಪ್ರಾರ್ಥಿಸುವವನೂ ಆಗಿದ್ದೇನೆ.